ಸಂಪುಟ : 9 ಸಂಚಿಕೆ 101 ಪುಟ : 4 ಬೆಲೆ: ೩.೦೦ ಗುರುವಾರ ಮೇ 23 2024 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ

Volume : 9 Issue : 101 Pages : 4 Price : 3.00 Thursday May 23 2024 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

ಶ್ರೀ ವೆಂಕಟೇಶ್ವರ ದೇವಸ್ಥಾನದ ವಾರ್ಷಿಕೋತ್ಸವ ಇಂದು

■ ವಿಜಯಸಾಕ್ಷಿ ಸುದ್ದಿ, ಗದಗ

ಹಿಂದೂ ಸವಿತಾ ಸಮಾಜ, ಬೆಟಗೇರಿಯ ರಂಗಾವಧೂತರ ತಪೋಭೂಮಿಯಲ್ಲಿರುವ ಶ್ರೀ ವೆಂಕಟೇಶ್ವರ ದೇವಸ್ಥಾನದಲ್ಲಿ ಮೇ23, ಬುದ್ಧಪೂರ್ಣಿಮೆಯಂದು ಶ್ರೀ ವೆಂಕಟೇಶ್ವರ ದೇವಸ್ಥಾನದ 26ನೇ ವರ್ಷದ ವಾರ್ಷಿಕೋತ್ಸವ ಕಾರ್ಯಕ್ರಮ ನಡೆಯಲಿದೆ. ಅಂದು ದೇವಸ್ಥಾನದಲ್ಲಿ ಶ್ರೀದೇವರಿಗೆ ವಿಶೇಷ ಪೂಜಾ ವಿಧಿ-ವಿಧಾನಗಳು, ಮಹಾಭಿಷೇಕ ಜೊತೆಗೆ ಶ್ರೀ ಸತ್ಯನಾರಾಯಣ ಪೂಜೆ ನಡೆಯಲಿದೆ.

ಈ ವಿಶೇಷ ದಿನದಲ್ಲಿ ಸಮಾಜದ ಸರ್ವ ಬಂಧುಗಳು, ಹಿರಿಯರು ಹಾಗೂ ಯುವಕರು ಪಾಲ್ಗೊಂಡು ವಾರ್ಷಿಕೋತ್ಸವ ಕಾರ್ಯಕ್ರಮ-ವನ್ನು ಅದ್ದೂರಿಯಿಂದ ನಡೆಸಿಕೊ ಡಲಿದ್ದಾರೆ. ಕಾರ್ಯಕ್ರಮದಲ್ಲಿ ಸರ್ವ ಸದ್ಭಕ್ತರು ಆಗಮಿಸಿ ತನು-ಮನ-ಧನದಿಂದ ಸೇವೆ ಸಲ್ಲಿಸಿ, ಪ್ರಸಾದ ಸ್ವೀಕರಿಸಿ ಶ್ರೀಹರಿಯ ಕೃಪೆಗೆ ಪಾತ್ರರಾಗಬೇಕೆಂದು ಟ್ರಸ್ಟ ಕಮಿಟಿಯ ಪದಾಧಿಕಾರಿಗಳು ವಿನಂತಿಸಿದ್ದಾರೆ.

ಅರ್ಜಿ ಆಹ್ವಾನ

■ ವಿಜಯಸಾಕ್ಷಿ ಸುದ್ದಿ, ಗದಗ

2024-25ನೇ ಸಾಲಿಗೆ ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯಗಳಿಗೆ ಮಂಜೂರಾತಿ ಸಂಖ್ಯೆಗಿಂತಲೂ ಹೆಚ್ಚು ವಿದ್ಯಾರ್ಥಿನಿಯರು ಪ್ರವೇಶ ಕೋರಿ ಅರ್ಜಿಗಳನ್ನು ಸಲ್ಲಿಸಿದ್ದಾರೆ. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ನವೀಕರಣ ವಿದ್ಯಾರ್ಥಿಗಳು ಇರುವುದರಿಂದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ನಿಲಯಗಳಿಗೆ ಪ್ರವೇಶ ನೀಡಬೇಕಾಗಿರುವುದರಿಂದ ಬಾಡಿಗೆ ಕಟ್ಟಡವನ್ನು ಪಡೆದು ಪ್ರವೇಶ ಕಲ್ಪಿಸಿಕೊಡುವಂತೆ ಸಮಾಜ ಕಲ್ಯಾಣ ಇಲಾಖೆ ಆಯುಕ್ತರು ಸೂಚಿಸಿದ್ದಾರೆ.

150 ವಿದ್ಯಾರ್ಥಿಗಳಿಗೆ ಸ್ಥಳಾವಕಾಶ ಇರುವ ಪ್ರತ್ಯೇಕ ಕೊಠಡಿಗಳನ್ನು, ಶೌಚಾಲಯ, ಸ್ನಾನಗೃಹ ವಿಶಾಲವಾದ ಅಡುಗೆ ಮನೆ, ವಿದ್ಯುತ್ ಸೌಲಭ್ಯ, ಬೋರ್‌ವೆಲ್ ಹೊಂದಿರುವ ಸುಸಜ್ಜಿತ ಕಟ್ಟಡಗಳ ಅವಶ್ಯಕತೆ ಇರುತ್ತದೆ. ಕಟ್ಟಡವನ್ನು ಬಾಡಿಗೆ ರೂಪದಲ್ಲಿ ಕೊಡಲು ಬಯಸುವ ಕಟ್ಟಡ ಮಾಲೀಕರು ತಕ್ಷಣ ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಗದಗ ಇವರನ್ನು ಸಂಪರ್ಕಿಸಬಹುದಾಗಿದೆ. (ಕಛೇರಿ ದೂರವಾಣಿ ಸಂಖ್ಯೆ-08372-297258, ಮೊಬೈಲ್ ಸಂಖ್ಯೆ-9480843128)

ಆರೋಪಿ ಪ್ರಜ್ವಲ್ ರೇವಣ್ಣಗೆ ಸಿದ್ದರಾಮಯ್ಯ ಕ್ರಿಮಿನಲ್ ಹಣೆಪಟ್ಟಿ ಕಟ್ಟಿದ್ದಾರೆ: ಕುಮಾರಸ್ವಾಮಿ

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು

'ಇನ್ನೂ ಆರೋಪಿಯಾಗಿರುವ ಜೆಡಿಎಸ್ ಸಂಸದ ಪ್ರಜ್ವಲ್ ರೇವಣ್ಣ ಅವರಿಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈಗಾಗಲೇ ಕ್ರಿಮಿನಲ್ ಎಂಬ ಹಣೆಪಟ್ಟಿ ಕಟ್ಟಿದ್ದಾರೆ' ಎಂದು ಜೆಡಿಎಸ್ ಮುಖಂಡ, ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಹೇಳಿದ್ದಾರೆ.

ಲೈಂಗಿಕ ಹಗರಣದ ಆರೋಪಿ ಪ್ರಜ್ವಲ್ ರೇವಣ್ಣ ಮಾಜಿ ಪ್ರಧಾನಿ ಎಚ್.ಡಿ ಮೊಮ್ಮಗ.ಕುಮಾರಸ್ವಾಮಿ ಅವರ ಅಣ್ಣನ ಮಗನಾಗಿದ್ದು, ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿತ ಜೆಡಿಎಸ್ ಅಭ್ಯರ್ಥಿಯಾಗಿದ್ದಾರೆ.

ವಾಹನದ ದಾಖಲಾತಿ ಸರಿ ಇಲ್ಲದ ಕಾರಣ ಗದುಗಿನಲ್ಲಿ ಆಂಧ್ರದ ಖಾಸಗಿ ಬಸ್ ಸೀಜ್

ನೆರೆ ರಾಜ್ಯದ ಪ್ರವಾಸಿಗರ ಪರದಾಟ

■ ವಿಜಯಸಾಕ್ಷಿ ಸುದ್ದಿ, ಗದಗ

ಟೂರಿಸ್ಟ್ ಬಸ್ ಒಂದರ ಚಾಸ್ಸಿ, ಇಂಜಿನ್ ಸಂಖ್ಯೆ ಹೊಂದಾಣಿಕೆಯಾಗದ ಹಿನ್ನೆಲೆಯಲ್ಲಿ ಆಂಧ್ರಪ್ರದೇಶ ಮೂಲದ ಖಾಸಗಿ ಬಸ್ ಒಂದನ್ನು ಗದಗ ಆರ್‌ಟಿಓ ಅಧಿಕಾರಿಗಳು ಸೀಜ್ ಮಾಡಿದ್ದಾರೆ. ಅಧಿಕಾರಿಗಳು ತಮ್ಮ ಕರ್ತವ್ಯವನ್ನು ಮಾಡಿದ್ದಾರಲ್ಲ, ಇದರಲ್ಲೇನು ವಿಶೇಷವಿದೆ ಎಂಬ ಅನುಮಾನ ಮೂಡುವುದು ಸಹಜ. ಆದರೆ, ಈ ಪ್ರಕರಣದಿಂದಾಗಿ, ಬಸ್‌ನಲ್ಲಿ ಪ್ರಯಾಣಿಸುತ್ತಿದ್ದ 49 ಪ್ರಯಾಣಿಕರು ಆರ್‌ಟಿಓ ಕಚೇರಿ ಆವರಣದಲ್ಲಿಯೇ ರಾತ್ರಿ ಕಳೆಯುವಂತಾಗಿದ್ದು ಮಾತ್ರ ಶೋಚನೀಯ.

ಆಂಧ್ರ ಪ್ರದೇಶದ ಕಡಪಾ ಜಿಲ್ಲೆಯ ಪುಲಿವೆಂದುಲಾ ಮೂಲದ 49 ಜನರು ಅಲ್ಲಿನ ಖಾಸಗಿ ಬಸ್ ಒಂದನ್ನು ಬಾಡಿಗೆಗೆ ಪಡೆದು ಆಂಧ್ರ, ಕರ್ನಾಟಕ,

ಗೋವಾ ಪ್ರವಾಸಕ್ಕೆ ತೆರಳುತ್ತಿದ್ದರು. ವೆಂಕಟಲಕ್ಷ್ಮೀನಾರಾಯಣ ಎಂಬುವವರ AP03-TE8520 ಸಂಖ್ಯೆಯ ಬಸ್ ಬುಕ್ ಮಾಡಲಾಗಿತ್ತು. ಒಟ್ಟು 1 ಲಕ್ಷ 70 ಸಾವಿರ ರೂ ಬಾಡಿಗೆ ಹಣಕ್ಕೆ ಪ್ರವಾಸ ಮಾಡಿಸುವುದಾಗಿ ಬಸ್ ಮಾಲೀಕರು ಒಪ್ಪಿಕೊಂಡಿದ್ದರು. ಮುಂಗಡ 70 ಸಾವಿರ ರೂ ಪಡೆದು, ಹೈದ್ರಾಬಾದ್ ಪ್ರವಾಸ ಮಾಡಿಸಿ ಕರ್ನಾಟಕ ಮಾರ್ಗವಾಗಿ ಗೋವಾಕ್ಕೆ ತೆರಳುತ್ತಿದ್ದರು. ಮಂಗಳವಾರ ಗದಗ ನಗರಕ್ಕೆ ಪ್ರವೇಶಿಸುತ್ತಿದ್ದಂತೆ, ಆರ್‌ಟಿಓ ಅಧಿಕಾರಿಗಳು ಹೊರ ರಾಜ್ಯದ ರಿಜಿಸ್ಟ್ರೇಷನ್ ಇರುವ ಸದರಿ ಬಸ್ ತಡೆದು, ದಾಖಲೆ ಪತ್ರಗಳ ಪರಿಶೀಲನೆ ನಡೆಸಿದ್ದರು.

ತಪಾಸಣೆಯ ಸಂದರ್ಭದಲ್ಲಿ ವಾಹನದ ಚಾಸ್ಸಿ ನಂಬರ್‌ನ್ನು ಕಾನೂನು ಬಾಹಿರವಾಗಿ ತಿರುಚಿರುವುದು ಗೊತ್ತಾಗಿದೆ. ಅಲ್ಲಿಂದ ಆರ್‌ಟಿಓ ಕಚೇರಿಗೆ ಬಸ್ ಕರೆಸಿ, ಇಂಜಿನ್ ನಂಬರ್ ಪರಿಶೀಲಿಸಲಾಗಿದೆ. ಇಂಜಿನ್ ನಂಬರ್ ಕೂಡ ತಿರುಚಿರುವುದು ಬೆಳಕಿಗೆ ಬಂದಿದೆ. ಅನುಮಾನಗೊಂಡ ಅಧಿಕಾರಿಗಳು ಬಸ್

ಸೀಜ್ ಮಾಡಿಕೊಂಡಿದ್ದಾರೆ.

ಬಸ್ ಸೀಜ್ ಮಾಡಿರುವ ಅಧಿಕಾರಿಗಳು, ಬಸ್ ಸೇಫ್ಟಿ ಹಿನ್ನೆಲೆಯಲ್ಲಿ ಸಂಚಾರ ಮಾಡಲು ಯೋಗ್ಯವಾಗಿಲ್ಲ. ಚಾಸ್ಸಿ ನಂಬರ್ ಬದಲಾಯಿಸಿರುವುದೂ ಗಮನಕ್ಕೆ ಬಂದಿದ್ದು, ಒಂದೇ ಸಂಖ್ಯೆಯ ಎರಡು ಬಸ್‌ಗಳು ಸಂಚರಿಸುತ್ತಿರುವ ಸಾಧ್ಯತೆಗಳಿವೆ. ಹೀಗಾಗಿ, ಈ ಬಗ್ಗೆ ಪರಿಶೀಲನೆ ಮಾಡಿ, ಕರ್ನಾಟಕ ಮೋಟಾರ್ ವೈಹಿಕಲ್ ಟ್ಯಾಕ್ಸೇಷನ್ ಕಾಯ್ದೆ ಅಡಿ ಬಸ್ ಸೀಜ್ ಮಾಡಲಾಗಿದೆ ಎಂದು ಆರ್‌ಟಿಓ ಅಧಿಕಾರಿ ಲಕ್ಷ್ಮೀಕಾಂತ ಮಾಹಿತಿ ನೀಡಿದ್ದಾರೆ.

ಈ ಘಟನೆಯಿಂದ ಪೇಚಿಗೆ ಸಿಲುಕಿರುವ ಬಸ್‌ನಲ್ಲಿದ್ದ ಪ್ರವಾಸಿಗರು, ಇಲ್ಲಿನ ಭಾಷೆಯೂ ಬರದೇ ಮುಂದೇನು ಎಂದು ಕಂಗಾಲಾಗಿದ್ದಾರೆ. ಇವರ ಕಷ್ಟವನ್ನರಿತ ಅಧಿಕಾರಿಗಳು, ಅವರ ಊರಿಗೆ ಹಿಂದಿರುಗಲು ಪರ್ಯಾಯ ವ್ಯವಸ್ಥೆ ಮಾಡಿಕೊಡಲು ಮುಂದಾಗಿದ್ದರು. ಆದರೆ, ಈಗಾಗಲೇ ಬಸ್‌ನ ಬಾಡಿಗೆ ಶುಲ್ಕ ಪಾವತಿಸಿರುವುದರಿಂದ, ಪುನಃ ಬೇರೆ ವಾಹನಕ್ಕೆ ಹಣ ನೀಡಲು ಒಪ್ಪುತ್ತಿಲ್ಲ ಎನ್ನಲಾಗಿದೆ.

> ಬಸ್‌ನಲ್ಲಿ ಪ್ರಯಾಣಿಸುತ್ತಿದ್ದ ಮಹಿಳೆಯರು, ಮಕ್ಕಳು ಆರ್‌ಟಿಓ ಕಚೇರಿ ಅಂಗಳದಲ್ಲೇ ಅಡುಗೆ ಸಿದ್ಧಪಡಿಸಿಕೊಳ್ಳುತ್ತಿದ್ದಾರೆ, ಅಲ್ಲಿಯೇ ಉಂಡು, ಅಲ್ಲಿಯೇ ವಿಶ್ರಾಂತಿ ಪಡೆಯುತ್ತಿದ್ದಾರೆ. ಒಟ್ಟಿನಲ್ಲಿ, ತಮ್ಮದಲ್ಲದ ತಪ್ಪಿಗೆ ಅಮಾಯಕ ಪ್ರವಾಸಿಗರು ಪರದಾಡುತ್ತಿರುವುದು ನಗರದಲ್ಲಿ ಹಲವು ವಿಧದ ಚರ್ಚೆಗೆ ಕಾರಣವಾಗಿದೆ.

ವಿವಿಧ ಇಲಾಖೆಗಳ ಸಹಯೋಗದಲ್ಲಿ ಮಾನವ ಸರಪಳಿ ಪ್ರದರ್ಶನ

ರಾಷ್ಟ್ರೀಯ ಡೆಂಗೀ ದಿನ ಆಚರಣೆ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಅಧಿಕಾರಿಗಳ ಕಾರ್ಯಾಲಯ, ವಾರ್ತಾ ಇಲಾಖೆ ಗದಗ ಇವರ ಸಂಯುಕ್ತ ಆಶ್ರಯದಲ್ಲಿ ಬುಧವಾರ ರಾಷ್ಟ್ರೀಯ ಡೆಂಗಿ ದಿನದ ನಿಮಿತ್ತ ಜಿಲ್ಲಾ ಮಟ್ಟದ ಮಾನವ ಸರಪಳಿ ಪ್ರದರ್ಶನ, ಜನಜಾಗೃತಿ ಕಾರ್ಯಕ್ರಮ ಜರುಗಿತು.

ಜಿಲ್ಲಾ ಪಂಚಾಯತ ಯೋಜನಾ ನಿರ್ದೇಶಕ ಜಗದೇವ ಬಿ ಮತ್ತು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ಎಸ್.ಎಸ್. ನೀಲಗುಂದ ಜಿಲ್ಲಾ ಮಟ್ಟದ ಮಾನವ ಸರಪಳಿ ಪ್ರದರ್ಶನ, ಜನಜಾಗೃತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಪರಿಸರ ಸ್ವಚ್ಛತೆ ಹಾಗೂ ನೀರಿನ ಸರಿಯಾದ ನಿರ್ವಹಣೆ ಮೂಲಕ, ಸ್ವಯಂ ರಕ್ಷಣಾ ವಿಧಾನಗಳನ್ನು ಅಳವಡಿಸಿಕೊಳ್ಳುವುದರ ಮೂಲಕ ಡೆಂಗಿ ಜ್ವರವನ್ನು ಹರಡದಂತೆ ತಡೆಯಬಹುದು. ಡೆಂಗಿ ನಿಯಂತ್ರಣಕ್ಕೆ ಸಮುದಾಯದ ಸಹಭಾಗಿತ್ವ ಅವಶ್ಯ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಅನುಷ್ಠಾನ ಅಧಿಕಾರಿಗಳು, ತಾಲೂಕಾ ಆರೋಗ್ಯಾಧಿಕಾರಿ ಡಾ. ಪ್ರೀತ್ ಖೋನಾ, ಕೀಟಶಾಸ್ತ್ರಜ್ಞರಾದ ಅನ್ನಪೂರ್ಣ ಶೆಟ್ಟರ, ಜಿಲ್ಲಾ ಉಪ ಆರೋಗ್ಯ ಶಿಕ್ಷಣಾಧಿಕಾರಿ ಗೀತಾ ಕಾಂಬ್ಳೆ, ಬಿ.ಎಮ್. ಹುಲ್ಯಾಳ, ಈರಣ್ಣ ಚಲ್ಕಿ, ಆರೋಗ್ಯ ಇಲಾಖೆ ಸಿಬ್ಬಂದಿ ಎಸ್.ಎನ್. ಲಿಂಗದಾಳ, ಅಜಯಕುಮಾರ ಕಲಾಲ, ರಿಯಾಜ ಫೋಡುನಾಯ್ಕರ, ಎಮ್.ಹೆಚ್. ಕದಾಂಪೂರ, ಪ್ರಭು ಹೊನ್ನಗುಡಿ, ಬಿ.ಸಿ. ಹೀರೆಹಾಳ, ಏಕನಾಥ ಪಾಟೀಲ, ಎಸ್.ಬಿ. ಗಡಾದ, ವಾಯ್.ಎನ್. ಕಡೆಮನಿ, ಎಸ್.ಎನ್. ಕಟ್ಟಿಮನಿ, ವಾಯ್.ವಾಯ್. ಹಕ್ಕಿ ಮತ್ತು ಆಶಾ ಕಾರ್ಯಕರ್ತೆಯರು ಭಾಗವಹಿಸಿದ್ದರು.

> ಮಾನವ ಸರಪಳಿ ಪ್ರದರ್ಶನ, ಜನಜಾಗೃತಿ ಕಾರ್ಯಕ್ರಮದಲ್ಲಿ ಗಾಂಧಿ ವೃತ್ತದಿಂದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ರಸ್ತೆ ಉದ್ದಕ್ಕೂ ಡೆಂಗಿ ಕುರಿತು ಧ್ವನಿವರ್ಧಕದ ಮೂಲಕ ಅರಿವು ಮೂಡಿಸಲಾಯಿತು. ವಿವಿಧ ಘೋಷಣೆಗಳ ಫಲಕಗಳನ್ನು ಹಿಡಿದು, ಘೋಷಣೆಗಳನ್ನು ಕೂಗುತ್ತ ಬೀದಿಗಳಲ್ಲಿ ಸಂಚರಿಸಿ, ಕರಪತ್ರಗಳನ್ನು ಸಾರ್ವಜನಿಕರಿಗೆ ಹಂಚಲಾಯಿತು.

ಹಿಂದೂ-ಮುಸ್ಲಿಂ ಬಾಂಧವರ ಅಂತರಂಗ ಬೆಸೆದ ದರ್ಗಾ

ಟಕ್ಕೇದ ದರ್ಗಾದ ಉರುಸು ಕಾರ್ಯಕ್ರಮ

■ ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ಪಟ್ಟಣದ ಟಕ್ಕೇದ ದರ್ಗಾದ ಹಜರತ್ ಸೈಯದ್ ಮಾಸೂಮ್ ಅಲಿಶಾ ಪೀರಾಂ ಹಾಗೂ ಹಜರತ್ ನಿಶಾರ ಅಲಿಷ್ಯಾ ಪೀರಾಂ ಅವರ ದರ್ಗಾದ ಉರುಸು ಮೇ 23ರ ಸಂಜೆ ಕೆಳಗಲ ಪೇಟೆಯ ದುರ್ಗಾದೇವಿಯ ಉಚ್ಚಾಯ ಎಳೆದ ಬಳಿಕ ದರ್ಗಾದ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ.

ಭವ್ಯ ಇತಿಹಾಸ ಹೊಂದಿರುವ ಇಲ್ಲಿನ ಟಕ್ಕೇದ ದರ್ಗಾವು ಕಳೆದ ಕೆಲ ಶತಮಾನಗಳಿಂದ ಹಿಂದೂ-ಮುಸ್ಲಿಂ ಬಾಂಧವರ ಅಂತರಂಗದ ತಂತುಗಳನ್ನು ಕೂಡಿಸುವ ಕಾಯಕದಲ್ಲಿದೆ. ಮೇ.23 ಹಾಗೂ 24 ರಂದು ಜಿಯಾರತ್ ಫಾತಿಹಾಃ ಜರುಗಲಿದೆ.

ನಾಡಿನಲ್ಲಿ ಈ ಹಿಂದೆ ಶಾಂತಿ ಕದಡುವ ಯತ್ನಗಳು ನಡೆದಾಗ ಉರುಸಿನ ಸಂದರ್ಭದಲ್ಲಿ ಅನೇಕ ಮಠಾಧೀಶರು, ಸಾಹಿತಿಗಳು, ಬುದ್ಧಿಜೀವಿಗಳು ಹಾಗೂ ಧಾರ್ಮಿಕ ಮುಖಂಡರನ್ನು ಒಂದು ಗೂಡಿಸಿ ಸಾಮರಸ್ಯ ಕೆಡದಂತೆ ಕೋಮು ಸೌಹಾರ್ದತಾ ಮತ್ತು ಭಾವೈಕ್ಯತಾ ಸಮಾವೇಶಗಳ ಜತೆಗೆ ಪ್ರಗತಿಪರ ವಿಚಾರಧಾರೆಗಳೊಂದಿಗೆ ವಿವಿಧತೆಯಲ್ಲಿ ಏಕತೆಯ ರೂಪದಂತೆ ಪ್ರಚಾರದ ಗೋಜಿಗೆ ಅಂಟಿಕೊಳ್ಳದೇ ಸೂಫಿ ಪರಂಪರೆಯನ್ನು ಮುಂದುವರಿಸಿಕೊಂಡು, ಹಲವಾರು ರೋಗ-ರುಜಿನಗಳಿಗೆ ಆಯುರ್ವೇದ ಔಷಧಿ ನೀಡುವ ಕೀರ್ತಿ ಟಕ್ಕೇದ ಬಾಬಾನವರಿಗೆ ಸಲ್ಲುತ್ತದೆ.

ಸೂಫಿ ಸಂತ ಹಜರತ್ ಸೈಯದ್ ನಿಶಾರ ಅಲಿಷಾ ಪೀರಾಂರಿಂದ 1965ರಲ್ಲಿ ಬಯ್ಯತ್(ಗುರು ದೀಕ್ಷೆ) ಪಡೆದು ದರ್ಗಾದ 8ನೇ ಪೀಠಾಧಿಪತಿಯಾಗಿ ಹಜರತ್ ಸೈಯದ್ ಮೆಹಬೂಬ್ ಅಲಿಶಾ ಪೀರಾಂ ಅವರು ಟಕ್ಕೇದ ಬಾಬಾ, ಟಕ್ಕೇದ ಅಜ್ಜ ಹಾಗೂ ಟಕ್ಕೇದ ನಾನಾರೆಂದು ಕರೆಸಿಕೊಂಡರು. ಅನೇಕ ದಶಕಗಳಿಂದ ಜಾತಿ, ಮತ ಬೇಧ ಎಣಿಸದೆ, ಬಯಸಿ ಬಂದ ಭಕ್ತರನ್ನು ಪ್ರೀತಿಯಿಂದ ಕಂಡು ರೋಗಿಗಳಿಗೆ ಮಂತ್ರ ಶಕ್ತಿಯಿಂದ ಪರಿಹಾರ ನೀಡಿದ್ದಾರೆ. 9ನೇ ಪೀಠಾಧಿಪತಿಯಾಗಿ (2015) ಹಜರತ್ ಸೈಯದ್ ನಿಜಾಮುದ್ದೀನ್ ಶಾ ಮಕಾನದಾರ ಅವರು ಭಕ್ತರ ಪ್ರೀತಿಗೆ ಪಾತ್ರರಾಗಿದ್ದಾರೆ.

> ಸೌಹಾರ್ದತೆಯ ಪ್ರತೀಕವಾಗಿರುವ ಸೈಯದ್ ಟಕ್ಕೇದ ದರ್ಗಾದ ಉರುಸು ಪ್ರತಿ ವರ್ಷ ಭೌದ್ಧ ಪೂರ್ಣಿಮೆಯ ದಿನದಂದು ಜರುಗಲಿದೆ. ಆ ದಿನದಂದೇ ಸಂಜೆ ಕೆಳಗಲ ಪೇಟೆಯ ದುರ್ಗಾದೇವಿಯ ಉಚ್ಚಾಯ ಎಳೆದ ಬಳಿಕ ಉರುಸಿನ ಧಾರ್ಮಿಕ, ಸಾಂಸ್ಕೃತಿಕ ಹಾಗೂ ಅನ್ನಸಂತರ್ಪಣೆ ಆಚರಣೆಗಳಿಗೆ ಚಾಲನೆ ನೀಡುವುದು ವಿಶೇಷತೆಯಾಗಿದೆ.

ರಥದ ಗಾಲಿಗೆ ಸಿಲುಕಿ ಮೃತರಾದವರ ಕುಟುಂಬಸ್ಥರಿಗೆ ಸಾಂತ್ವನ ಹೇಳಿದ ಶಾಸಕ ಜಿ.ಎಸ್. ಪಾಟೀಲ

ಮೃತರ ಕುಟುಂಬಕ್ಕೆ ತಲಾ ಲಕ್ಷ ರೂ ಪರಿಹಾರ

■ ವಿಜಯಸಾಕ್ಷಿ ಸುದ್ದಿ, ರೋಣ

ರೋಣ ಪಟ್ಟಣದ ವೀರಭದ್ರೇಶ್ವರ ಜಾತ್ರಾ ಮಹೋತ್ಸವದ ಸಂಧರ್ಭದಲ್ಲಿ ರಥೋತ್ಸವದ ಗಾಲಿಗೆ ಸಿಲುಕಿ ಇಬ್ಬರು ಭಕ್ತರು ತಮ್ಮ ಪ್ರಾಣವನ್ನು ಕಳೆದುಕೊಂಡಿದ್ದರು. ಈ ಹಿನ್ನೆಲೆಯಲ್ಲಿ, ಶಾಸಕ ಜಿ.ಎಸ್. ಪಾಟೀಲ ಮೃತರ ಮನೆಗಳಿಗೆ ತೆರಳಿ ಸಾಂತ್ವಾನ ಹೇಳಿದರಲ್ಲದೆ, ವಯಕ್ತಿಕವಾಗಿ ಎರಡೂ ಕುಟುಂಬಕ್ಕೆ ತಲಾ 1 ಲಕ್ಷ ರೂಗಳ ಪರಿಹಾರ ವಿತರಿಸಿ, ತುಟುಂಬದ ಸದಸ್ಯರಿಗೆ ಧೈರ್ಯ ತುಂಬಿದರು.

ಮೇ 18ರಂದು ಪಟ್ಟಣದ ವೀರಭದ್ರೇಶ್ವರ ಜಾತ್ರಾ ಮಹೋತ್ಸವದ ರಥೋತ್ಸವದ ಸಂಧರ್ಭದಲ್ಲಿ ಈ ದುರ್ಘಟನೆ ಸಂಭವಿಸಿತ್ತು. ಪಟ್ಟಣದ ನಿವಾಸಿ ಮಲ್ಲನಗೌಡ ಲಿಂಗನಗೌಡ್ರ (55) ಹಾಗೂ ತಾಲೂಕಿನ ಬಾಸಲಾಪೂರ ಗ್ರಾಮದ

> ಈ ಘಟನೆ ನನ್ನ ಮನಸ್ಸಿಗೆ ತುಂಬಾ ನೋವು ತರಿಸಿದೆ. ಕುಟುಂಬಸ್ಥರಿಗೆ ಮೃತರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಭಗವಂತ ದಯಪಾಲಿಸಲಿ. ಸರಕಾರದಿಂದ ಸೂಕ್ತ ಪರಿಹಾರ ಕೊಡಿಸುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ.
> – ಜಿ.ಎಸ್. ಪಾಟೀಲ.
> ಶಾಸಕರು, ರೋಣ.

ಗೊಡಚಪ್ಪ ಬಾರಕೇರ (32) ಎಂಬ ಇಬ್ಬರು ಭಕ್ತರು ಮೃತರಾಗಿದ್ದರು. ಮೃತ ಮಲ್ಲನಗೌಡ ಲಿಂಗನಗೌಡ್ರ ಅವರ ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಿರುವ ಶಾಸಕ ಪಾಟೀಲ, ತಮ್ಮದೇ ಶಿಕ್ಷಣ ಸಂಸ್ಥೆಯಲ್ಲಿ ಉಚಿತ ಶಿಕ್ಷಣ ಒದಗಿಸಲಾಗುವುದು ಎಂದರಲ್ಲದೆ, ಕುಟುಂಬಸ್ಥರು ಅತಂತ್ರ ಭಾವನೆ ಅನುಭವಿಸುವ ಅಗತ್ಯವಿಲ್ಲ. ನಿಮ್ಮೊಂದಿಗೆ ಸದಾಕಾಲವೂ ಇರುವುದಾಗಿ ತಿಳಿಸಿ, ಸರಕಾರದಿಂದಲೂ ಹೆಚ್ಚಿನ ಪರಿಹಾರ ಕೊಡಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ತಿಳಿಸಿದರು. ಬಾಸಾಲಾಪೂರ ಗ್ರಾಮಕ್ಕೆ ತೆರಳಿ ಮೃತ ಯುವಕನ ತಂದೆ-ತಾಯಿಗಳಿಗೆ ಧೈರ್ಯ ತುಂಬಿದ ಶಾಸಕ ಜಿ.ಎಸ್. ಪಾಟೀಲ, ಕುಟುಂಬಸ್ಥರಿಗೆ ಸಾಂ

ಸಂಪಾದಕೀಯ

ಚಿತ್ರೋದ್ಯಮದ ಮೇಲೆ ಕರಿ ನೆರಳು

ಕನ್ನಡ ಚಿತ್ರೋದ್ಯಮ ಸದ್ಯ ಒಂದು ತಿಂಗಳ ಮಟ್ಟಿಗೆ ಬಂದ ಆಗಲಿದೆ ಎನ್ನುವ ಈ ಸಂಗತಿ ಚಿತ್ರೋದ್ಯಮ ಕ್ಷೇತ್ರದಲ್ಲಿ ಸಂಚಲನ ಸೃಷ್ಟಿಸಿದೆ. ಚಿತ್ರ ನಿರ್ಮಾಣವನ್ನೇ ನಂಬಿ ಬದುಕುತ್ತಿರುವ ಕಲಾವಿದರು ಮತ್ತು ತಂತ್ರಜ್ಞರು, ಚಿತ್ರಮಂದಿರಗಳ ಮಾಲೀಕರು ಕಾರ್ಮಿಕರು ಚಿತ್ರೋದ್ಯಮದಲ್ಲಿ ನಡೆಯುತ್ತಿರುವ ವಿದ್ಯಮಾನಗಳ ದೃಷ್ಟಿ ನೆಡುತ್ತಿದ್ದಾರೆ.

ತೆಲುಗು ಚಿತ್ರೋದ್ಯಮದ ರೀತಿಯಲ್ಲಿ ಕನ್ನಡ ಚಿತ್ರೋದ್ಯಮ್ಮ ಕೂಡ ತಾತ್ಕಾಲಿಕವಾಗಿ ಬಂದಾಗಲಿದೆ ಎನ್ನುವ ವದಂತಿ ಹರಿದಾಡಿತ್ತು. ಆದರೆ ಇದೆಲ್ಲಾ ಸುಳ್ಳು ಎನ್ನುವುದು ಚಲನಚಿತ್ರ ವಾಣಿಜ್ಯ ಮಂಡಳಿ ಸ್ಪಷ್ಟನೆ ನೀಡಿದೆ.

ಆದರೆ ಕನ್ನಡ ಚಲನಚಿತ್ರ ಉದ್ಯಮ ಯಾವ ದಿಕ್ಕಿನಲ್ಲಿ ಸಾಗಬೇಕು ಎನ್ನುವ ಕುರಿತು ಆತ್ಮಾವಲೋಕನ ಮಾಡಿಕೊಳ್ಳುವ ಕಾಲ ಈಗ ಬಂದಿದೆ ಎಂದು ವಾಣಿಜ್ಯೋದ್ಯಮ ಮಂಡಳಿಯ ಸದಸ್ಯರು ಅಭಿಪ್ರಾಯ ಪಟ್ಟಿದ್ದಾರೆ.

ಕಳೆದೊಂದು ವರ್ಷದಲ್ಲಿ ಕನ್ನಡದಲ್ಲಿ ಹೇಳಿಕೊಳ್ಳುವಂತಹ ಸಿನಿಮಾಗಳು ಬಿಡುಗಡೆಯಾಗದ ಕಾರಣ ಚಿತ್ರಮಂದಿರಗಳು ಸಂಕಷ್ಟ ಎದುರಿಸಬೇಕಾಯಿತು. ಸಿಂಗಲ್ ಸ್ಕ್ರೀನ್ ಚಿತ್ರಮಂದಿರಗಳು ಇನ್ನು ಕೆಲವೇ ದಿನಗಳಲ್ಲಿ ಇತಿಹಾಸದ ಪುಟ ಸೇರುವಷ್ಟರಮಟ್ಟಿಗೆ ನೆಪತ್ಯಕ್ಕೆ ಸರಿದಿವೆ.

ಕೋವಿಡ್ ನಂತರ ಚಿತ್ರಮಂದಿರಗಳು ಮತ್ತೆ ತೆರೆಯುವುದೇ ಇಲ್ಲ ಎನ್ನುವಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು. ಆದರೆ ಕೆಲ ಸದಭಿರುಚಿಯ ಚಿತ್ರಗಳು ಕನ್ನಡ ಚಿತ್ರೋದ್ಯಮವನ್ನು ಮತ್ತೆ ಮುನ್ನಲಿಗೆ ತರುವಂತೆ ಮಾಡಿದವು. ಸ್ಟಾರ್ ನಟರು ಮಾತ್ರವಲ್ಲದೇ ಹೊಸಬರ ಚಿತ್ರಗಳು ಸದ್ದು ಮಾಡಿದವು.

ಆದರೆ ವರ್ಷದಿಂದ ಈಚೆಗೆ ಹೊಸ ಚಿತ್ರಗಳು ಬಿಡುಗಡೆ ಆದರೂ ಹೇಳಿಕೊಳ್ಳುವಂಥ ಯಶಸ್ಸು ಕಾಣಲಿಲ್ಲ. ಸಹಜವಾಗಿ ಚಿತ್ರೋದ್ಯಮ ಮತ್ತೆ ಸಂಕಷ್ಟಕ್ಕೆ ಸಿಲುಕುವಂತಾಯಿತು. ಹೀಗಾಗಿ ಆತ್ಮಾವಲೋಕನ ಅನಿವಾರ್ಯವಾಗಿದೆ. ಆದರೆ ಬಂದ್ ಮಾಡುವ ನಿರ್ಧಾರ ಮಾತ್ರ ಒಳ್ಳೆಯದಲ್ಲ ಎನ್ನುವುದನ್ನು ಕರ್ನಾಟಕ ಚಲನಚಿತ್ರ ವಾಣಿಜ್ಯೋದ್ಯಮ ಮಂಡಳಿ ಅರ್ಥ ಮಾಡಿಕೊಳ್ಳಬೇಕು.

ಕೋಮು-ಸೌಹಾರ್ದತೆಯ ಹರಿಕಾರ ಕರ್ತೃ ಶ್ರೀ ಜಗದ್ಗುರು ಫಕೀರೇಶ್ವರರ ಜಾತ್ರಾ ಮಹೋತ್ಸವ

'ದ್ವೇಷ ಬಿಡು-ಪ್ರೀತಿ ಮಾಡು'

ಪವಾಡ ಪುರುಷ , ಕರ್ತೃ ಫಕೀರೇಶ್ವರರು 16ನೇ ಶತಮಾನದಲ್ಲಿ ವಿಜಾಪುರದಿಂದ ಶಿರಹಟ್ಟಿಗೆ ಬಂದು ನೆಲೆಸಿ ಇಲ್ಲಿ ತಮ್ಮ ಅನೇಕ ಪವಾಡಗಳನ್ನು ಮಾಡಿ ಕಷ್ಟ ಸಂಕೋಲೆಯಲ್ಲಿರುವವರಿಗೆ ಸುಖ-ಶಾಂತಿಯನ್ನು, ಮಕ್ಕಳಿಲ್ಲದವರಿಗೆ ಸಂತಾನಭಾಗ್ಯವನ್ನು ಕರುಣಿಸಿ, ಮಾನವೀಯತೆಯ ತಳಹದಿಯಲ್ಲಿ 'ದ್ವೇಷ ಬಿಡು-ಪ್ರೀತಿ ಮಾಡು' ಎಂಬ ದಿವ್ಯ ಸಂದೇಶದಿಂದ ಹಿಂದೂ-ಮುಸ್ಲಿಂರಲ್ಲಿ ಭಾವೈಕ್ಯತೆಯನ್ನು ಮೂಡಿಸಿದವರು. ಜ.ಫಕೀರೇಶ್ವರರ ಜಾತ್ರೆಯು ಪ್ರತಿವರ್ಷದಂತೆ ಈ ವರ್ಷವೂ ಸಹ ಆಗಿ ಹುಣ್ಣಿಮೆಯ ದಿನವಾದ ಮೇ.23ರ ಗುರುವಾರ ದಿವಸ ಸಹಸ್ರಾರು ಭಕ್ತರ ಹರ್ಷೋದ್ಗಾರದೊಂದಿಗೆ ಮಹಾರಥೋತ್ಸವ ಜರುಗಲಿದೆ.



ಫಕೀರೇಶ್ವರರು ಮೂಲತಃ ವಿಜಾಪೂರದ ಶಿವಯ್ಯ ಮತ್ತು ಗೌರಮ್ಮ ಎಂಬ ಶಿವಶರಣ ದಂಪತಿಗಳಿಗೆ ಪುತ್ರ ಸಂತಾನದಿಂದ ಪರಿತಪಿಸುತ್ತಿರುವಾಗ ಖಾಜಾ ಅಮೀನರ ಆಶೀರ್ವಾದದಿಂದ ಜನಿಸಿದ ಚನ್ನವೀರರು ಸಂಸಾರ ವ್ಯಾಮೋಹವನ್ನು ಬಯಸದೇ ಜಗತ್ತಿಗೆ ಒಳಿತನ್ನು ಮಾಡುವ ಓರ್ವ ಧರ್ಮ ದಾರ್ಶನಿಕನಾಗಬೇಕೆಂಬ ಹಂಬಲದಿಂದ ಲೋಕಸಂಚಾರ ಮಾಡುತ್ತಾ ಶಿರಹಟ್ಟಿಗೆ ಬಂದು ನೆಲೆಸಿ, ಮುಸ್ಲಿಂರಿಗೆ ಫಕೀರನಾಗಿ, ಹಿಂದೂಗಳಿಗೆ ಈಶ್ವರನಾಗಿ ಭಾವೈಕ್ಯದಿಂದ ಲೋಕಕ್ಕೆ ಫಕೀರೇಶ್ವರನಾಗಿ ಶಿರಹಟ್ಟಿ ಕ್ಷೇತ್ರವನ್ನು ಪುಣ್ಯಕ್ಷೇತ್ರವನ್ನಾಗಿ ಮಾಡಿದರು.

ವಿಜಾಪೂರದ ಆದಿಲ್‌ಶಾಹಿ ಕುತಬಿ ಹಬ್ಬದ ನಿಮಿತ್ತ ನಮಾಜು ಮಾಡಲು ಖಾಜಾ ಅಮೀನರನ್ನು ಆಹ್ವಾನಿಸಿದಾಗ, ಪಕ್ಕದಲ್ಲಿದ್ದ ಬಾಲಕ ಚನ್ನವೀರನನ್ನು ನಮಾಜಿಗೆ ಆಹ್ವಾನಿಸಲು ಅಮೀನರು ಮಾಡಿದ ಸಲಹೆಯನ್ನು ಆದಿಲ್‌ಶಾಹಿ ನಿರಾಕರಿಸಿದ. ಆಗ, ಖಾಜಾ ಅಮೀನರು ಬಾಲಕನಲ್ಲಿರುವ ದೈವಿಕ ಶಕ್ತಿಯನ್ನು ತೋರಿಸುವದಕ್ಕಾಗಿ ನೀರ ಮೇಲೆ ಜಮಖಾನೆ ಹಾಸಿ ನಮಾಜು ಮಾಡಲು ಹೇಳಿದಾಗ, ಚನ್ನವೀರರು ನೀರ ಮೇಲೆ ನಮಾಜ ಮಾಡಿದ್ದನ್ನು ಕಂಡ ಆದಿಲ್‌ಶಾಹಿ ಗೌರವದಿಂದ ನಮಸ್ಕರಿಸಿ ಆದರಾತಿಥ್ಯದಿಂದ ಸತ್ಕರಿಸಿ ಹಿಂದೂ ಎಂದು ಜರಿದಿದ್ದು ತಪ್ಪೆಂದು ಭಾವಿಸಿದ ಆದಿಲ್‌ಶಾಹಿ ಅಲ್ಲಮಪ್ರಭುವಿನ ಅವತಾರಿಯೆಂದು ಹೇಳುತ್ತಾನೆ.

ಮುಂದೆ ಫಕೀರೇಶ್ವರರು ಖಾಜಾ ಅಮೀನರಿಂದ ಆಶೀರ್ವಾದ ಪಡೆದು ಲೋಕಸಂಚಾರ ಮಾಡುತ್ತಾ, ಶಿರೋಳದಲ್ಲಿ ಹಾವು ಕಚ್ಚಿದ ಮಗುವಿಗೆ ಜೀವದಾನ ಮಾಡಿದರು. ಚಿತ್ರದುರ್ಗದ ಮುರುಘಾಮಠದ ಪ್ರವೇಶಕ್ಕೆ ದ್ವಾರಪಾಲಕರು ನೀನು ಮುಸ್ಲಿಂ ಎಂದು ಜರಿದು ಹೊರಹಾಕಿದಾಗ, ಪವಾಡ ಸದೃಶ್ಯರಾಗಿ ಮುರುಘಾಮಠದ ಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ ಕಂಡು ದ್ವಾರಪಾಲಕರು ಬೆರಗಾದರೆ ಮುರುಘರಾಜೇಂದ್ರ ಮಹಾಸ್ವಾಮಿಗಳು ಫಕೀರರನ್ನು ಕಂಡು ಸಂತಸದಿಂದ ಆಲಂಗಿಸಿ ಅವರನ್ನು ಸತ್ಕರಿಸಿದ್ದಾರೆ.

ಲಕ್ಷ್ಮೇಶ್ವರವು ಅಂಕುಶಖಾನ ಎಂಬ ರಾಜನ ಆಡಳಿತಕ್ಕೆ ಒಳಪಟ್ಟ ಕಾಲದಲ್ಲಿ ರಾಜನು ತನ್ನ ರಾಣಿಯೊಂದಿಗೆ ಪಗಡೆಯಾಟ ಆಡುತ್ತಿರುವಾಗ ದೀಪಕ್ಕೆ ಎಣ್ಣೆ ಇಲ್ಲದಾಯಿತು. ಆಗ ಆಟದ ಅಮಲಿನಲ್ಲಿ ರಾಜನು ಡಂಗುರ ಸಾರಿ ದೀಪಕ್ಕೆ ಎಣ್ಣೆ ಕೊಟ್ಟರೆ ಕೇಳಿದ್ದನ್ನು ಕೊಡುವುದಾಗಿ ಹೇಳುತ್ತಾನೆ. ಆಗ ಅಲ್ಲಿಯೇ ಇದ್ದ ಫಕೀರೇಶ್ವರರು ಸೋಮನಗೌಡ ಎಂಬ ಬಾಲಕನಿಗೆ ತಮ್ಮ ಕೈಯಲ್ಲಿರುವ ಕಮಂಡಲದ ನೀರನ್ನು ಹಾಕಲು ಹೇಳುತ್ತಾನೆ. ನೀರಿನಿಂದ ದೀಪ ಬೆಳಗಿತು. ಮುಂಜಾನೆ ರಾಜನ ಬಳಿ ಸೋಮನಗೌಡ ಹೋಗಿ ತನಗೆ ರಾಜ್ಯವನ್ನು ಬಿಟ್ಟುಕೊಡುವಂತೆ ಕೇಳಿದಾಗ ಬಾಲಕನಿಗೆ ಈ ಮಾತನ್ನು ಯಾರು ಹೇಳಿದರು ಎಂದು ಕೇಳಿದಾಗ, ಫಕೀರೇಶ್ವರರು ಪ್ರತ್ಯಕ್ಷರಾಗಿ ಅಂಕುಶಖಾನಿಗೆ ನೀನು ಮಕ್ಕಳ ಇಲ್ಲದ ರಾಜನಾಗಿದ್ದು, ಕೊಟ್ಟ ಮಾತಿನಂತೆ ರಾಜ್ಯ ದಾನ ಮಾಡಬೇಕು ಹಾಗೂ ಸೋಮನಗೌಡನ ವಂಶಸ್ಥರು ಕೊನೆಗೆ ಖಾನ್ ಎಂಬ ಹೆಸರನ್ನು ಸೇರಿಸಬೇಕೆಂಬ ಗುರುವಿನ ಆಜ್ಞೆಯಂತೆ ಇಂದಿಗೂ ಅದೇ ಹೆಸರಿನಿಂದ ಸಂಬೋಧಿಸುವ ಮೂಲಕ ಹಿಂದೂ-ಮುಸ್ಲಿಂ ಭಾವೈಕ್ಯತೆಯ ರಾಜ ವಂಶವಾಗಿ ಮಾರ್ಪಟ್ಟಿತು.

ಹೀಗೆ ಅನೇಕ ಪವಾಡಗಳ ಮೂಲಕ ಲೋಕಕಲ್ಯಾಣಾರ್ಥವಾಗಿ ಸಂಚರಿಸಿದ ಫಕೀರೇಶ್ವರರು 'ಅಲ್ಲಾ ಏಕ್ ಹೈ ನಾಮ ತೋ ಫರಕ ಹೈ, ಸಬ್ ಕಾ ಮಾಲೀಕ ಏಕ್ ಹೈ, ಏಕಂ ಸತ್ ವಿಪ್ರಾ ಬಹುದಾ ವದಂತಿ' ಎಂಬ ಅನೇಕ ಹಿಂದೂ-ಮುಸ್ಲಿಂ ಭಾವೈಕ್ಯತೆಯ ಸಂದೇಶಗಳನ್ನು ಸಾರಿ ಶಿರಹಟ್ಟಿಯಲ್ಲಿ ಬಂದು ಸರ್ಪ ರೂಪಿಯಾಗಿ ದೇಹ ತ್ಯಾಗ ಮಾಡಿ ಹುತ್ತದಲ್ಲಿ ಮಾಯವಾದರು. ಅದೇ ಸರ್ಪದ ಹುತ್ತವೇ ಈಗಿನ ಕರ್ತೃ ಗದ್ದುಗೆಯಾಗಿ ಪ್ರತಿನಿತ್ಯವೂ ಪೂಜೆ ಪುನಸ್ಕಾರ ನಡೆಯುತ್ತಿದೆ. 13ನೇ ಪೀಠಾಧ್ಯಕ್ಷ ಜ.ಫಕೀರ ಸಿದ್ದರಾಮ ಸ್ವಾಮೀಜಿಗಳ ನೇತೃತ್ವದಲ್ಲಿ ಮೇ.23ರ ಸಂಜೆ 5 ಗಂಟೆಗೆ ರಥೋತ್ಸವ, ಮೇ.24ರ ಶುಕ್ರವಾರ ಸಂಜೆ 5 ಗಂಟೆಗೆ ಕಡುಬಿನ ಕಾಳಗ ಇತ್ಯಾದಿ ಕಾರ್ಯಕ್ರಮಗಳು ನಡೆಯಲಿದ್ದು, ಉತ್ತರಾಧಿಕಾರಿ ಜ.ಫ.ದಿಂಗಾಲೇಶ್ವರ ಸ್ವಾಮೀಜಿ ಶ್ರೀಗಳಿಗೆ ಸಾಥ್ ನೀಡಲಿದ್ದಾರೆ.

ಪ್ಯಾಲೆಸ್ತೀನ್ ಒಂದು ರಾಷ್ಟ್ರವೆಂದು ಮಾನ್ಯ ಮಾಡಿದ ನಾರ್ವೆ, ಸ್ಪೇನ್, ಐರ್ಲೆಂಡ್

■ ವಿಜಯಸಾಕ್ಷಿ ಸುದ್ದಿ, ಐರ್ಲೆಂಡ್

ಐರ್ಲೆಂಡ್, ನಾರ್ವೆ ಮತ್ತು ಸ್ಪೇನ್ ದೇಶಗಳು ಪ್ಯಾಲೆಸ್ತೀನ್ ಅನ್ನು 'ಪ್ರತ್ಯೇಖ ರಾಷ್ಟ್ರ' ಎಂದು ಘೋಷಿಗಳು ನಿರ್ಧರಿಸಿವೆ. ಮೇ 28ರಿಂದ ಅಧಿಕೃತ ಘೋಷಣೆ ಹೊರ ಬೀಳುವ ಸಾಧ್ಯತೆ ಇದೆ.

ಇದು ಇಸ್ರೇಲ್ ವಿರುದ್ಧ ಅಥವಾ ಹಮಾಸ್ ಪರವಾದ ನಿರ್ಧಾರವಲ್ಲ. ಇದು 'ಶಾಂತಿಯ ಪರ'ವಾದ ನಿರ್ಧಾರ ಎಂದು ಸ್ಪೇನ್ ಹೇಳಿದೆ.

"ದ್ವಿರಾಷ್ಟ್ರ ಪರಿಹಾರ ಇಸ್ರೇಲ್‌ನ ಹಿತಾಸಕ್ತಿಯಲ್ಲಿದೆ" ಎಂದು ನಾರ್ವೆಯ ಪ್ರಧಾನಿ ಜೊನಾಸ್ ಗಹರ್ ಸ್ಟೋರ್ ಬುಧವಾರ ಹೇಳಿದ್ದಾರೆ. ಮೇ 28ರಿಂದ ಪ್ಯಾಲೆಸ್ತೀನ್‌ಗೆ ಪ್ರತ್ಯೇಕ ರಾಷ್ಟ್ರದ ಮಾನ್ಯತೆ ಸಿಗಲಿದೆ. ದ್ವಿರಾಷ್ಟ್ರ ಪರಿಹಾರವಲ್ಲದೆ ಮಧ್ಯಪ್ರಾಚ್ಯದಲ್ಲಿ ಶಾಂತಿ ನೆಲೆಸದು ಎಂದಿದ್ದಾರೆ.

ಪ್ಯಾಲೆಸ್ತೀನ್ ಅನ್ನು ಪ್ರತ್ಯೇಖ ರಾಷ್ಟ್ರ ಎಂದು ಘೋಷಿಸುವುದು ಕ್ರೂರ ಆಕ್ರಮಣದಲ್ಲಿ ತಮ್ಮದೆಲ್ಲವನ್ನು ಕಳೆದುಕೊಂಡಿರುವ ಅಮಾಯಕ ಜನರನ್ನು ಬೆಂಬಲಿಸುವ ಕ್ರಮ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ನಾರ್ವೆಯ ನಿರ್ಧಾರದ ಬೆನ್ನಲ್ಲೇ ಐರ್ಲೆಂಡ್ ಪ್ರಧಾನಿ ಸೈಮನ್ ಹ್ಯಾರಿಸ್ ಅವರು ತಮ್ಮ ದೇಶ ಕೂಡ ಪ್ಯಾಲೆಸ್ತೀನ್ ಅನ್ನು ಪ್ರತ್ಯೇಕ ರಾಷ್ಟ್ರ ಎಂದು ಪರಿಗಣಿಸಲಿದೆ ಎಂದಿದ್ದಾರೆ.

"ಇಂದು ಐರ್ಲೆಂಡ್, ನಾರ್ವೆ ಮತ್ತು ಸ್ಪೇನ್ ಪ್ಯಾಲೆಸ್ತೀನ್ ಅನ್ನು ಪ್ರತ್ಯೇಕ ದೇಶವೆಂದು ಗುರುತಿಸಲು ನಿರ್ಧರಿಸಿದ್ದೇವೆ. ನಾವು ಪ್ರತಿಯೊಬ್ಬರೂ ಈ ನಿರ್ಧಾರವನ್ನು ಜಾರಿಗೆ ತರಲು ಅಗತ್ಯವಿರುವ ಎಲ್ಲಾ ರಾಷ್ಟ್ರೀಯ ಕ್ರಮಗಳನ್ನು ಕೈಗೊಳ್ಳುತ್ತೇವೆ ಎಂದು ಹ್ಯಾರಿಸ್ ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ.

ಕಾಂಗ್ರೆಸ್ ಮುಖಂಡ, ಮಾಜಿ ಸಂಸದ ಇಕ್ಬಾಲ್ ಅಹ್ಮದ್ ಸರಡಗಿ ನಿಧನ

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡ, ಮಾಜಿ ಸಂಸದ, ವಿಧಾನ ಪರಿಷತ್ ಮಾಜಿ ಸದಸ್ಯ ಇಕ್ಬಾಲ್ ಅಹ್ಮದ್ ಸರಡಗಿ ನಿಧನರಾಗಿದ್ದಾರೆ.

80ರ ಹರೆಯದ ಇಕ್ಬಾಲ್ ಅಹ್ಮದ್ ಸರಡಗಿ ಅನಾರೋಗ್ಯದ ಹಿನ್ನೆಲೆಯಲ್ಲಿ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಆದರೆ ಚಿಕಿತ್ಸೆ ಫಲಿಸದೆ ಇಂದು ಮೃತಪಟ್ಟಿದ್ದಾರೆ.

1944ರ ಜೂ.5ರಂದು ಕಲಬುರಗಿಯಲ್ಲಿ ಜನಿಸಿದ್ದ ಇಕ್ಬಾಲ್ ಅಹ್ಮದ್ ಸರಡಗಿ, ಎಲ್.ಎಲ್.ಬಿ ಶಿಕ್ಷಣ ಪಡೆದಿದ್ದರು.

ಸರಡಗಿ 1999ರಿಂದ 2009ರವರೆಗೆ ಎರಡು ಅವಧಿಗೆ ಕಲಬುರಗಿ ಕ್ಷೇತ್ರದಿಂದ ಸಂಸದರಾಗಿ ಆಯ್ಕೆಯಾಗಿದ್ದರು. 2014ರಿಂದ 2020ರವರೆಗೆ ಕರ್ನಾಟಕ ವಿಧಾನ ಪರಿಷತ್ ಸದಸ್ಯರಾಗಿದ್ದರು.

ಈ ಅವಧಿಯಲ್ಲಿ ಸರಕಾರದ ವಿವಿಧ ಸಮಿತಿಗಳ ಸದಸ್ಯರಾಗಿಯೂ ಸೇವೆ ಸಲ್ಲಿಸಿದರು. ಮೃತರು ಪತ್ನಿ ಸೇರಿ ಓರ್ವ ಪುತ್ರ ಮತ್ತು ಮಗಳನ್ನು ಅಗಲಿದ್ದಾರೆ.

ಇಂದು ಸಂಜೆ 5 ಗಂಟೆಗೆ ಹಫತ್ ಗುಂಬಜ್ ಪ್ರದೇಶದ ನ್ಯಾಷನಲ್ ಕಾಲೇಜು ಸಮೀಪದ ಮಸೀದಿಯಲ್ಲಿ ಅಂತಿಮ ಪ್ರಾರ್ಥನೆ ನಡೆದು ಬಳಿಕ ದಫನ ಕಾರ್ಯ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿದೆ.

ಇಕ್ಬಾಲ್ ಅಹ್ಮದ್ ಸರಡಗಿ ನಿಧನದ ಬಗ್ಗೆ ಎಕ್ಸ್‌ನಲ್ಲಿ ಸಂತಾಪ ಸೂಚಿಸಿ ಪೋಸ್ಟ್ ಮಾಡಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ನನ್ನ ಆತ್ಮೀಯ ಗೆಳೆಯ, ಹಿರಿಯ ಕಾಂಗ್ರೆಸ್ ನಾಯಕ ಹಾಗೂ ಗುಲ್ಬರ್ಗದ ಮಾಜಿ ಸಂಸದ ಶ್ರೀ ಇಕ್ಬಾಲ್ ಅಹಮದ್ ಸರಡಗಿ ಅವರ ನಿಧನದಿಂದ ತೀವ್ರ ನೋವಾಗಿದೆ.

ಶಿಕ್ಷಣತಜ್ಞ ಮತ್ತು ಪರೋಪಕಾರಿ, ಅವರು ಗುಲ್ಬರ್ಗದ ಜನರ ಉನ್ನತಿಗಾಗಿ ಅವಿರತವಾಗಿ ಶ್ರಮಿಸಿದರು ಮತ್ತು ಎಲ್ಲರಿಗೂ ಕಲ್ಯಾಣಕ್ಕಾಗಿ ಶ್ರಮಿಸಿದವರು.

ಅವರ ಕೌನ್ಸಿಲರ್ ದಿನಗಳಿಂದ ಅವರು ಗುಲ್ಬರ್ಗದ ಸಂಸದರಾದ ಸಮಯದವರೆಗೆ ಮತ್ತು ನಂತರ ನಾವು ಈ ರಾಜಕೀಯ ಕ್ಷೇತ್ರದಲ್ಲಿ ಒಟ್ಟಾಗಿ ಪ್ರಯಾಣಿಸಿದ್ದೇವೆ, ಆದ್ದರಿಂದ ಇದು ನನಗೆ ವೈಯಕ್ತಿಕವಾಗಿ ದೊಡ್ಡ ನಷ್ಟವಾಗಿದೆ. ಈ ದುಃಖದ ಸಮಯದಲ್ಲಿ, ಅವರ ಕುಟುಂಬ, ಸ್ನೇಹಿತರು ಮತ್ತು ಅನುಯಾಯಿಗಳಿಗೆ ನನ್ನ ಹೃತ್ಪೂರ್ವಕ ಸಂತಾಪಗಳು ಎಂದು ಹೇಳಿದ್ದಾರೆ.

ಮೇ 23 ಬುದ್ಧ ಪೂರ್ಣಿಮಾ ನಿಮಿತ್ತ ವಿಶೇಷ ಲೇಖನ

ಮಾನವೀಯತೆಯ ಸಾಕಾರಮೂರ್ತಿ ಬುದ್ಧ

'ಸ್ವತಃ ಹೋರಾಡಿ ಗೆಲುವು ಸಾಧಿಸಬೇಕು' ಎಂದು ಬುದ್ಧ ಹೇಳುತ್ತಾನೆ. ಅಂದರೆ ಮನುಷ್ಯ ತನ್ನ ಜೀವನದಲ್ಲಿ ಎಷ್ಟೇ ಯುದ್ಧಗಳನ್ನು ಗೆದ್ದು ಬೀಗಿರಲಿ. ಆದರೆ, ಆತ ಸ್ವಂತ ಹೋರಾಟದ ಮೂಲಕ ಗೆಲುವು ದಾಖಲಿಸದೆ ಹೋದರೆ, ಈ ಹಿಂದೆ ಗೆದ್ದ ಎಲ್ಲ ಗೆಲವು ವ್ಯರ್ಥವಾಗುತ್ತದೆ. ಹೀಗಾಗಿ ಇತರರ ಸಹಾಯದಿಂದ ಸಾವಿರ ಯುದ್ಧ ಗೆಲ್ಲುವ ಬದಲು, ಸ್ವಂತ ಬಲದಲ್ಲಿ ಒಂದೇ ಯುದ್ಧ ಗೆದ್ದರೂ ಪರವಾಗಿಲ್ಲ ಎನ್ನುವುದು ಬುದ್ಧನ ಹಿತ ನುಡಿ.

ವೈಶಾಖ ಹುಣ್ಣಿಮೆಯನ್ನು ಬುದ್ಧ ಪೂರ್ಣಿಮಾ ಎಂದೂ ಕರೆಯಲಾಗುತ್ತದೆ. ಈ ಬಾರಿ ಬುದ್ಧ ಪೂರ್ಣಿಮಾವನ್ನು ಮೇ 23ರಂದು ಆಚರಿಸಲಾಗುತ್ತದೆ. ಈ ಬಾರಿ ಗೌತಮ ಬುದ್ಧನ 2586ನೇ ಜಯಂತಿಯನ್ನು ಬುದ್ಧ ಪೂರ್ಣಿಮಾ ಎಂದು ಆಚರಿಸಲಾಗುತ್ತದೆ. ಗೌತಮ ಬುದ್ಧನ ಜನ್ಮದಿನದಂದು, ಅವನ ಅನುಯಾಯಿಗಳು ಶೋಭಾ ಯಾತ್ರೆ, ಭಜನೆ, ದಾನ, ಪೂಜೆಯನ್ನು ಮಾಡುತ್ತಾರೆ. ಈ ವರ್ಷದ ಬುದ್ಧ ಪೂರ್ಣಿಮೆಯನ್ನು ಬಹಳ ವಿಶೇಷವೆಂದು ಪರಿಗಣಿಸಲಾಗಿದೆ. ಏಕೆಂದರೆ, ಈ ದಿನದಂದು ಕೆಲವು ವಿಶೇಷ ಯೋಗದ ಶುಭ ಸಂಯೋಜನೆಯು ಈ ದಿನದ ಮಹತ್ವವನ್ನು ದ್ವಿಗುಣಗೊಳಿಸುತ್ತದೆ.

ಬುದ್ಧ ಲುಂಬಿನಿ ವನದಲ್ಲಿ, ವೈಶಾಖ ಶುದ್ಧ ಪೌರ್ಣಮಿಯಂದು ಶುದ್ಧೋದನ ಮತ್ತು ಮಾಯಾದೇವಿಯ ಮಗನಾಗಿ ಜನಿಸುತ್ತಾನೆ. ಮೊದಲ ಹೆಸರು ಸಿದ್ಧಾರ್ಥ. ಮಗುವಿಗೆ ಏಳು ದಿನವಾದಾಗ, ತಾಯಿ ಮಾಯಾದೇವಿ ಅಸುನೀಗಿದಳು. ತಾಯಿಯನ್ನು ಕಳೆದುಕೊಂಡ ಬುದ್ಧನನ್ನು ಎರಡನೇ ತಾಯಿ ಪ್ರಜಾಪತಿದೇವಿ (ಗೌತಮಿ) ಸಾಕುತ್ತಾಳೆ. ಆದುದರಿಂದ ಇವನು ಸಿದ್ಧಾರ್ಥ 'ಗೌತಮ'ನೆಂದು ಕರೆಯಲ್ಪಡುತ್ತಾನೆ.

ಆರು ವರ್ಷಗಳ ನಂತರ ರಾಜಕುಮಾರನಾಗಿ ತನ್ನ ಸ್ಥಾನವನ್ನು ತ್ಯಜಿಸಿ ಕಷ್ಟಗಳನ್ನು ಎದುರಿಸಿದ ನಂತರ, ಅವರು ಮೇ ತಿಂಗಳ ಹುಣ್ಣಿಮೆಯ ದಿನವಾದ ಗೌತಮ ಬುದ್ಧನಾಗಲು ಬೋಧಗಯಾದ ಬೋಧಿ ವೃಕ್ಷದ ಕೆಳಗೆ ಜ್ಞಾನೋದಯವನ್ನು ಪಡೆದರು. ಸಾಧಕನು ತನ್ನ ಸತ್ಯವನ್ನು ಬೋಧಿಸಿದ 45 ವರ್ಷಗಳ ನಂತರ, ತನ್ನ ಎಂಬತ್ತನೇ ವಯಸ್ಸಿನಲ್ಲಿ ಕುಸಿನಾರಾದಲ್ಲಿ ಹುಣ್ಣಿಮೆಯ ದಿನದಂದು ನಿಧನರಾದರು.

ಕಷ್ಟ-ಕಾರ್ಪಣ್ಯಗಳ ಅರಿವಿಲ್ಲದೆ ಸುಖವಾಗಿ ಅರಮನೆಯಲ್ಲಿ ಬದುಕುತ್ತಿದ್ದ ಸಿದ್ಧಾರ್ಥ ಒಂದು ದಿನ ಸೇವಕನ ಜತೆ-ಗೂಡಿ ಹೊರ ಸಂಚಾರಕ್ಕಾಗಿ ಹೋಗಿದ್ದಾಗ ವೃದ್ಧ, ಶವ ಹಾಗೂ ರೋಗಿಯನ್ನು ಕಂಡು ಮರುಗಿದ. ಅದುವೇ ಆತನ ಯೋಚನಾ ಪರಿಧಿಯ ಬದಲಾವಣೆಗೆ ಪ್ರೇರಣೆಯಾಯಿತು. ಅರಸೊತ್ತಿಗೆಯನ್ನು ತ್ಯಜಿಸಿ, ರಾತ್ರೋರಾತ್ರಿ ಹೆಂಡತಿ, ಮಗನನ್ನು ಬಿಟ್ಟು ಲೋಕ ಸಂಚಾರಕ್ಕೆ ಹೊರಟ. ಮುಂದೆ ಜ್ಞಾನೋದಯವಾಗಿ ಬುದ್ಧನಾದ. ಕಾಲಾನಂತರದಲ್ಲಿ ಬೌದ್ಧ ಧರ್ಮವನ್ನು ಸ್ಥಾಪಿಸಿದರು.

ಬುದ್ಧನ ಮೊದಲ ಹೆಸರು ಸಿದ್ಧಾರ್ಥ. ಪ್ರಜಾಪತಿದೇವಿ ಸಾಕಿದ್ದರಿಂದ ಪ್ರಜಾಪತಿ ಗೌತಮನೆಂದೂ, ಜ್ಞಾನ ಸಂಪಾದನೆಯಾದ ಮೇಲೆ ಬುದ್ಧನೆಂದು ಕರೆಯಲಾಗಿದೆ. ಬೌದ್ಧಧರ್ಮದಲ್ಲಿ ಕೋಪ, ಲೋಭ, ಮೌಢ್ಯಗಳನ್ನು ಸಂಪೂರ್ಣವಾಗಿ ಜಯಿಸಿದವನನ್ನು ಬುದ್

ಅಗಡಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಮೇ.24, 25ರಂದು ಪದವಿ ಪ್ರದಾನ ಸಮಾರಂಭ

'ಮೀಲಾಂಜೆ-2024' ಸಾಂಸ್ಕೃತಿಕ ಹಬ್ಬ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಈ ಭಾಗದ ವಿದ್ಯಾರ್ಥಿಗಳಿಗೆ ಗುಣಮಟ್ಟದ, ಉನ್ನತ ತಾಂತ್ರಿಕ ಶಿಕ್ಷಣ ನೀಡುವಲ್ಲಿ ಹೆಸರಾಗಿರುವ ಲಕ್ಷ್ಮೇಶ್ವರದ ಶ್ರೀಮತಿ ಕಮಲಾ ಶ್ರೀ ವೆಂಕಪ್ಪ ಎಂ ಅಗಡಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಮೇ.24 ಮತ್ತು 25 ರಂದು ರಾಷ್ಟ್ರೀಯ ಮಟ್ಟದ ತಾಂತ್ರಿಕ ಸಾಂಸ್ಕೃತಿಕ ಹಬ್ಬ 'ಮೀಲಾಂಜೆ-2024', ಪದವಿ ಪ್ರದಾನ ಸಮಾರಂಭ ಮತ್ತು ಹಳೆ ವಿದ್ಯಾರ್ಥಿಗಳ ಪುನರ್‌ಮಿಲನ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದು ಪ್ರಾಚಾರ್ಯ ಡಾ. ಪರಶುರಾಮ ಬಾರಕಿ ತಿಳಿಸಿದರು.

ಅವರು ಬುಧವಾರ ಕಾಲೇಜಿನಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದರು. ಹುಟ್ಟೂರಿನಲ್ಲಿ ಶಿಕ್ಷಣ, ಆರೋಗ್ಯ, ಧಾರ್ಮಿಕ, ಸಾಮಾಜಿಕ ಸೇವೆ ಮಾಡಬೇಕೆಂದು ಸಂಸ್ಥಾಪಕರಾಗಿದ್ದ ದಿ.ವೆಂಕಪ್ಪ ಅಗಡಿಯವರು ತಾಂತ್ರಿಕ ಕಾಲೇಜು, ಆಸ್ಪತ್ರೆ, ದೇವಸ್ಥಾನ ಸ್ಥಾಪಿಸುವ ಮೂಲಕ ವಿಶೇಷ ಕೊಡುಗೆ ನೀಡಿದ್ದಾರೆ. ಉತ್ತರ ಕರ್ನಾಟಕದಲ್ಲಿಯೇ ಗ್ರಾಮೀಣ ಮಟ್ಟದಲ್ಲಿ ಉತ್ತಮ ದರ್ಜೆಯ ಶಿಕ್ಷಣ ನೀಡುತ್ತಿರುವ ಅಗಡಿ ಸಂಸ್ಥೆಯು 21 ವರ್ಷಗಳಿಂದ ಶಿಕ್ಷಣ ರಂಗದಲ್ಲಿ ಉತ್ತಮ ಸೇವೆ ಸಲ್ಲಿಸುತ್ತಿದೆ.

2 ದಿನಗಳ ಕಾಲ ನಡೆಯುವ ಕಾರ್ಯಕ್ರಮಗಳಲ್ಲಿ ವಿವಿಧ ರಾಜ್ಯಗಳಿಂದ ಆಗಮಿಸುವ ತಾಂತ್ರಿಕ ಶಿಕ್ಷಣದ ವಿದ್ಯಾರ್ಥಿಗಳು ಮೀಲಾಂಜೆ-24ರಲ್ಲಿ ತಮ್ಮ ಪ್ರತಿಭೆ ಪ್ರದರ್ಶಿಸಲಿದ್ದಾರೆ.

ರಾಷ್ಟ್ರೀಯ ಮಟ್ಟದ ತಾಂತ್ರಿಕ ಸಾಂಸ್ಕೃತಿಕ ಮೇಳ ಮೀಲಾಂಜೆ-24 ಸಮಾರಂಭ ಮೇ 24ರ ಬೆಳಿಗ್ಗೆ 10ಕ್ಕೆ ಸಿವಿಲ್ ಸಭಾಂಗಣದಲ್ಲಿ ನಡೆಯಲಿದೆ. ಹುಬ್ಬಳ್ಳಿಯ ಶ್ರಾವಣಿ ಪವಾರ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ವಿವಿಧ ಕಾಲೇಜುಗಳಿಂದ ಸುಮಾರು 40-50 ತಂಡದ ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ. ಮೇ.25ರಂದು ಬೆಳಿಗ್ಗೆ 10ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಕಾಲೇಜಿನ ಪದವಿ ಪೂರೈಸಿರುವ 226 ಪದವೀಧರರಿಗೆ ಪದವಿ ಪ್ರಧಾನ ಸಮಾರಂಭವು ನಡೆಯಲಿದೆ.

ಬಾಗಲಕೋಟೆ ವಿಶ್ವವಿದ್ಯಾಲಯದ ಉಪಕುಲಪತಿ ಪ್ರೊ. ಆನಂದ ದೇಶಪಾಂಡೆ ಅತಿಥಿಗಳಾಗಿ ಆಗಮಿಸಲಿದ್ದಾರೆ. ವಿದ್ಯಾರ್ಥಿಗಳು ವಿಜ್ಞಾನದ ವಿವಿಧ ಅವಿಷ್ಕಾರಗಳ ಪ್ರದರ್ಶನ ಮಾಡಲಿದ್ದಾರೆ. ಸಂಜೆ ಹಳೆಯ ವಿದ್ಯಾರ್ಥಿಗಳ ಪುನರ್‌ಮಿಲನ ಕಾರ್ಯಕ್ರಮಕ್ಕೆ ಬಿಫಿನ್ ಜುಗನಿಕರ್ ಅತಿಥಿಗಳಾಗಿ ಆಗಮಿಸಲಿದ್ದು, ಅಂದು ಪಾಲಕರು, ವಿವಿಧ ಗಣ್ಯರು ಆಗಮಿಸಲಿದ್ದಾರೆ.

> ಡಾ. ಗಿರೀಶ ಯತ್ತಿನಹಳ್ಳಿ, ಡಾ. ಸುಭಾಸ ಮೇಟಿ ಮಾತನಾಡಿ, ಇದೊಂದು ವೈಶಿಷ್ಟ್ಯಪೂರ್ಣ ಕಾರ್ಯಕ್ರಮವಾಗಿದ್ದು, ವಿಶೇಷ ಅತಿಥಿಗಳ ಮಾರ್ಗದರ್ಶನದ ಜೊತೆಗೆ ಸಾಂಸ್ಕೃತಿಕ ಸಂಜೆ ಕಾರ್ಯಕ್ರಮಗಳು ನಡೆಯಲಿದ್ದು, ಈ ಎಲ್ಲ ಕಾರ್ಯಕ್ರಮಗಳಿಗೆ ಪ್ರಾಚಾರ್ಯ ಡಾ. ಪರಶುರಾಮ ಬಾರಕಿ ಅವರು ಅಧ್ಯಕ್ಷತೆ ವಹಿಸಿ ಮಾರ್ಗದರ್ಶನ ಮಾಡಲಿದ್ದಾರೆ ಎಂದರು.

ಅಲ್ಲದೆ ಹಳೆಯ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದು, 2 ದಿನಗಳು ಕಾಲೇಜಿನಲ್ಲಿ ಹಬ್ಬದ ಸಂಭ್ರಮವಿರುತ್ತದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಕಾರ್ಯಕ್ರಮಗಳ ಸಂಚಾಲಕರಾಗಿರುವ ಪ್ರೊ. ರಾಜೇಶ್ವರಿ ಗಾಮನಗಟ್ಟಿ, ರಾಜೇಂದ್ರ ಶೆಟ್ಟರ, ಪ್ರೊ. ಶಂಭುಲಿಂಗ, ಡಾ. ಅರುಣ ಕುಂಬಿ, ಪ್ರೊ. ಪ್ರತಿಮಾ ಕೆ., ಡಾ. ಎಸ್.ವಿ. ಮಹಾಪುರುಷ, ಪ್ರೊ. ಪ್ರತಿಮಾ ಮಹಾಪುರುಷ, ಪ್ರೊ. ಸೋಮಶೇಖರ ಕೆರಿಮನಿ, ಪ್ರೊ. ಎಸ್. ಎಫ್. ಕೊಡ್ಲಿ, ಡಾ. ಸ್ವಪ್ನಾ ಜಿ., ಡಾ.ಮಹಾಂತೇಶ ತಟ್ಟಿಮನಿ ಹಾಜರಿದ್ದರು.

ಮಂದಹಾಸ ಮೂಡಿಸಿದ ಮಳೆ

■ ವಿಜಯಸಾಕ್ಷಿ ಸುದ್ದಿ, ಹರಪನಹಳ್ಳಿ

ತಾಲೂಕಿನಲ್ಲಿ ಹಲವು ದಿನಗಳಿಂದ ಜೋರಾಗಿ ಸುರಿಯುತ್ತಿರುವ ಮಳೆಯಿಂದಾಗಿ, ಅರಸೀಕೆರೆ ಗ್ರಾಮದ ಹೃದಯ ಭಾಗದಲ್ಲಿರುವ ಚಿಕ್ಕ ಕೆರೆಯು ಸಂಪೂರ್ಣ ತುಂಬುವ ಹಂತಕ್ಕೆ ಬಂದಿದೆ. ದೊಡ್ಡ ಕೆರೆಗೆ ನೀರಿನ ಒಳ ಹರಿವು ಹೆಚ್ಚುತ್ತಿದ್ದು, ಮುಂಗಾರಿನಲ್ಲೇ ಎರಡು ಕೆರೆಗಳಿಗೆ ನೀರು ಬಂದಿರುವುದು ಸಾರ್ವಜನಿಕರಲ್ಲಿ ಮಂದಹಾಸ ಮೂಡಿಸಿದೆ.

ಮಂಗಳವಾರ ಸುರಿದ ಭಾರೀ ಮಳೆಯಿಂದಾಗಿ ಅರಸೀಕೆರೆ ಹೋಬಳಿಯ ಅಣಜೀಗೆರೆ, ಮಾದಿಹಳ್ಳಿ, ಉಚ್ಚಂಗಿದುರ್ಗ, ತುಂಬಿಗೆರೆ ಸೇರಿದಂತೆ ಹಲವು ಕಡೆ ನರೇಗಾ ಯೋಜನೆ ಅಡಿಯಲ್ಲಿ ನಿರ್ಮಿಸಿರುವ ಗೋಕಟ್ಟೆಗಳು, ಹಳ್ಳ-ಕೊಳ್ಳಗಳು ತುಂಬಿ ಹರಿಯುತ್ತಿವೆ.

ಅರಸೀಕೆರೆ ರೈತ ಸಂಪರ್ಕ ಕಛೇರಿಗೆ ನೀರು ನುಗ್ಗಿದ ಪರಿಣಾಮ, ಬಿತ್ತನೆ ಬೀಜ ಹಾಗೂ ಗೊಬ್ಬರ ವಿತರಣೆಯನ್ನು ಕೆಲ ಸಮಯ ಸ್ಥಗಿತಗೊಳಿಸಲಾಗಿತ್ತು. ಕೋಲಶಾಂತೇಶ್ವರ ಮಠದ ಆವರಣವು ಸಂಪೂರ್ಣ ಜಲಾವೃತಗೊಂಡಿತ್ತು.

ಸಿಎಂ ಸಿದ್ದರಾಮಯ್ಯ ಬೆಂಗಳೂರು ರೌಂಡ್ಸ್

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಮಳೆಯಿಂದ ಪ್ರವಾಹ ಉಂಟಾಗಿ ಸಮಸ್ಯೆಗಳಾಗುವ ಪ್ರದೇಶಗಳ ಪರಿಶೀಲನೆಗೆಂದು ಮುಖ್ಯಮಂತ್ರಿ ಸಿದ್ಧರಾಮಯ್ಯ ನಗರ ಪ್ರದಕ್ಷಿಣೆ ಹಮ್ಮಿಕೊಂಡಿದ್ದು, ಬೆಳಿಗ್ಗೆ ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಪರಿಸ್ಥಿತಿಯನ್ನು ಅವಲೋಕಿಸಿದರು. ವಿಜಯನಗರದ ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನ ಸಮೀಪದ ರಾಜಕಾಲುವೆಯಲ್ಲಿ ಪ್ರತಿವರ್ಷ ಮಳೆಗಾಲದಲ್ಲಿ ಪ್ರವಾಹ ಉಂಟಾಗುತ್ತಿದ್ದು, ಈ ಸಂಬಂಧ ಅವರು ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿದರು.

ಈಗ ಇರುವ ರಾಜಾಕಾಲುವೆಗೆ ಸಮಾನಾಂತರವಾಗಿ ಇನ್ನೊಂದು ಕಾಲುವೆ ನಿರ್ಮಿಸುವುದರಿಂದ ಪ್ರವಾಹ ತಗ್ಗಿಸಬಹುದು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಮುಖ್ಯಮಂತ್ರಿಗಳಿಗೆ ವಿವರಿಸಿದರು. ಪ್ರವಾಹ ನಿಯಂತ್ರಣ ಕಾಮಗಾರಿಗೆ 11.5 ಕೋಟಿ ರೂ. ಅಂದಾಜು ವೆಚ್ಚದ ಯೋಜನೆ ರೂಪಿಸಲಾಗಿದ್ದು, ಈ ಕಾಮಗಾರಿಯನ್ನು ಕೂಡಲೇ ಕೈಗೆತ್ತಿಕೊಳ್ಳುವಂತೆ ಮುಖ್ಯಮಂತ್ರಿಗಳು ಸೂಚಿಸಿದರು. ಈ ರಾಜಕಾಲುವೆಗೆ ಸಾರ್ವಜನಿಕರು ಕಸ ಎಸೆಯುವುದನ್ನು ತಡೆಗಟ್ಟಲು ಕ್ರಮ ವಹಿಸುವಂತೆ ಸೂಚಿಸಿದರು. ಸಮಸ್ಯೆ ಬಗೆಹರಿಸಲು ಕೊಟ್ಟ ಕಾಲ ಮಿತಿಯೊಳಗೆ ಕಾಮಗಾರಿ ಪೂರ್ಣಗೊಳಿಸಲು ಸೂಚಿಸಿದ ಅವರು ಈ ವರ್ಷ ಸಮಸ್ಯೆಗೆ ಶಾಶ್ವತ ಪರಿಹಾರ ಆಗಬೇಕು. ಇಲ್ಲದಿದ್ದರೆ ಸಸ್ಪೆಂಡ್ ಆಗ್ತೀರ ಎಂದು ಮುಖ್ಯ ಇಂಜಿನಿಯರ್ ಗೆ ಎಚ್ಚರಿಸಿದರು.

ಸಮಾಜಕ್ಕೆ ಹಿರಿಯರ ಕೊಡುಗೆ ಅಪಾರ

■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಈ ಸಮಾಜಕ್ಕೆ ಹಿರಿಯರ ಕೊಡುಗೆ ಅಪಾರವಿದೆ. ನಿವೃತ್ತರಿಂದ ಸಮಾಜಕ್ಕೆ ಇನ್ನೂ ದೊಡ್ಡ ಕೊಡುಗೆ ಬರಬೇಕಿದೆ. ಈ ದಿಶೆಯಲ್ಲಿ ಈಗಾಗಲೇ ನಿವೃತ್ತರಾಗಿರುವವರು, ಹಿರಿಯ ನಾಗರಿಕರು ಯೋಚಿಸಬೇಕಿದೆ ಎಂದು ಶಿಕ್ಷಣ ತಜ್ಞ ಮಹೇಶ ಮಾಶಾಳ ಹೇಳಿದರು.

ಇಲ್ಲಿನ ಶ್ರೀ ಅನ್ನದಾನೇಶ್ವರ ಸಭಾಂಗಣದಲ್ಲಿ ಅಕ್ಷರ ಭಾರತ ಪ್ರತಿಷ್ಠಾನ ಗದಗ ಹಾಗೂ ಶ್ರೀ ಅನ್ನದಾನ ವಿಜಯ ವಿದ್ಯಾ ಪ್ರಸಾರಕ ಸಮಿತಿಯ ಸಹಯೋಗದಲ್ಲಿ ನಡೆದಿರುವ ಶೈಕ್ಷಣಿಕ ಪುನಃಶ್ಚೇತನ ಕಾರ್ಯಕ್ರಮದ 2ನೇ ದಿನದ 'ಭವಿಷ್ಯದ ಶಿಕ್ಷಕ ಗೋಷ್ಠಿ'ಯಲ್ಲಿ ಅವರು ಮಾತನಾಡಿದರು.

ಬಹಳಷ್ಟು ಜನ ಸೇವೆಗೆ ಸೇರಿದ ಕೆಲವೇ ವರ್ಷಗಳಲ್ಲಿ ತಮ್ಮ ನಿವೃತ್ತಿಯ ಬಗ್ಗೆ ಯೋಚಿಸಲು ಪ್ರಾರಂಭಿಸಿ ವೃತ್ತಿಯಲ್ಲಿ ಆಸಕ್ತಿಯನ್ನೇ ಕಳೆದುಕೊಳ್ಳುತ್ತಾರೆ. ನಿಮ್ಮ ವೃತ್ತಿ ಜೀವನದ ಅವಧಿ ಇರುವವರೆಗೂ ಪ್ರಾಮಾಣಿಕತೆಯಿಂದ ನಿಮ್ಮ ಸೇವೆಯನ್ನು ಸಲ್ಲಿಸಿ. ನಿಮ್ಮ ಮಕ್ಕಳ ಭವಿಷ್ಯವನ್ನು ಉಜ್ವಲವಾಗಿ ಬರೆಯಿರಿ ಎಂದು ಹೇಳಿದರು.

ಈಗಾಗಲೇ ಶಿಕ್ಷಕ ವೃತ್ತಿಯಿಂದ ನಿವೃತ್ತರಾದವರೂ ಸಹ ಇಂದಿನ ಶಿಕ್ಷಕರಿಗೆ ಮಾರ್ಗದರ್ಶನ ಮಾಡುವುದರ ಜೊತೆಗೆ ಮಕ್ಕಳಿಗೂ ಮಾರ್ಗದರ್ಶನ ಮಾಡಿ ದೇಶದ ಭವಿಷ್ಯಕ್ಕೆ ಕಾರಣರಾಗಬೇಕು. ಉದಾಸೀನ ಮನೋಭಾವನೆಯನ್ನು ನಿವೃತ್ತರು ಎಂದಿಗೂ ಪ್ರದರ್ಶಿಸಬಾರದು ಎಂದು ಕಿವಿಮಾತು ಹೇಳಿದರು.

ವೇದಿಕೆಯ ಮೇಲೆ ಉಪಸ್ಥಿತರಿದ್ದ ಶ್ರೀ ಮುಪ್ಪಿನ ಬಸವಲಿಂಗ ಮಹಾಸ್ವಾಮಿಗಳು ಮಾಶಾಳ ಅವರನ್ನು ಸನ್ಮಾನಿಸಿದರು. ಕಾರ್ಯಕ್ರಮದಲ್ಲಿ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ರವೀಂದ್ರನಾಥ ದೊಡ್ಡಮೇಟಿ, ಆಡಳಿತಾಧಿಕಾರಿ ಎನ್.ಆರ್. ಗೌಡರ, ಕಾಲೇಜು ಆಡಳಿತ ಮಂಡಳಿ ಚೇರಮನ್ ಬಸವರಾಜ ವೀರಾಪೂರ, ಪ್ರಾಚಾರ್ಯ ಎಸ್.ಜಿ. ಕೇಶಣ್ಣವರ, ಪಿಯು ಪ್ರಾಚಾರ್ಯ ವೈ.ಸಿ. ಪಾಟೀಲ, ಪ್ರಾಚಾರ್ಯೆ ಅನಸೂಯಾ ಪಾಟೀಲ ಮುಂತಾದವರಿದ್ದರು.

ಸಂಘಟಿತ ಹೋರಾಟದಿಂದ ಸಮಸ್ಯೆಗಳಿಗೆ ಮುಕ್ತಿ

■ ವಿಜಯಸಾಕ್ಷಿ ಸುದ್ದಿ, ಗದಗ

ಅವಳಿ ನಗರದ ಸ್ಲಂ ಪ್ರದೇಶಗಳ ಜನರು ತಮಗೆ ಸಿಗಬೇಕಾದ ಮೂಲಭೂತ ಹಕ್ಕುಗಳಿಂದ ವಂಚಿತರಾಗಿ ಅನೇಕ ಸಮಸ್ಯಗಳಿಂದ ಬಳಲುತ್ತಿದ್ದಾರೆ. ಗದಗ ಜಿಲ್ಲಾ ಸ್ಲಂ ಸಮಿತಿಯಿಂದ ನಗರದ ಕೊಳಗೇರಿ ಜನರ ಸಮಸ್ಯೆಗಳ ಪರಿಹಾರಕ್ಕಾಗಿ ಕಳೆದ ಹಲವಾರು ವರ್ಷಗಳಿಂದ ಸತತ ಪ್ರಯತ್ನಗಳನ್ನು ನಡೆಸುತ್ತಿದ್ದಾರೆ. ಇದನ್ನು ಗಮನಿಸಿ ಗದಗ-ಬೆಟಗೇರಿ ಅವಳಿ ನಗರದ ಸ್ಲಂ ಜನರು ತಮ್ಮ ಪ್ರದೇಶಗಳ ಅಭಿವೃದ್ಧಿಗಾಗಿ ಸಂಘಟಿತ ಹೋರಾಟ ನಡೆಸಿದರೆ ಕೊಳಗೇರಿಗಳ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗುತ್ತದೆ ಎಂದು

ಜೀವಜಲ ಭಾರತ ಸಂಸ್ಥೆಯ ಮುಖಂಡ ಜೋಸೆಫ್ ಸಂಕೇಶ್ವರ ಹೇಳಿದರು.

ಅವರು ನವನಗರ ಸ್ಲಂ ಪ್ರದೇಶದಲ್ಲಿ ಜೀವಜಲ ಭಾರತ ಸಂಸ್ಥೆ, ಗದಗ ಜಿಲ್ಲಾ ಸ್ಲಂ ಸಮಿತಿಯ ಸಹಕಾರದಲ್ಲಿ ಕೊಳವೆ ಬಾವಿ ಕೊರೆಸುವ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿ, ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ಗಮನಿಸಿ ಬಡ ಜನರು ಹೆಚ್ಚು ವಾಸವಾಗಿರುವ ಪ್ರದೇಶಗಳಲ್ಲಿ ಕೊಳವೆ ಬಾವಿ ಕೊರೆಸುವ ಕಾರ್ಯ ಕೈಗೊಳ್ಳಲಾಗುತ್ತಿದೆ ಎಂದರು.

ಗದಗ ಜಿಲ್ಲಾ ಸ್ಲಂ ಸಮಿತಿ ಅಧ್ಯಕ್ಷ ಇಮ್ತಿಯಾಜ ಆರ್.ಮಾನ್ವಿ ಮಾತನಾಡಿ, ಸ್ಲಂ ಪ್ರದೇಶಗಳಲ್ಲಿ ಕೊಳವೆ ಬಾವಿಗಳನ್ನು ಕೊರೆಯಿಸಿ ಸ್ಲಂ ಜನರ ಸಮಸ್ಯೆಗಳಿಗೆ ಪರಿಹಾರ ನೀಡುತ್ತಿರುವ ಸಂಸ್ಥೆಯ ಎಲ್ಲಾ ಮುಖಂಡರಿಗೆ ಧನ್ಯವಾದಗಳನ್ನು ಸಲ್ಲಿಸಿದರು.

ಜೀವಜಲ ಭಾತರ ಸಂಸ್ಥೆಯ ಸಂಯೋಜಕ ಜಕರಾಯ, ಸ್ಲಂ ಸಮಿತಿ ಉಪಾಧ್ಯಕ್ಷ ರವಿಕುಮಾರ ಬೆಳಮಕರ, ಕಾರ್ಯದರ್ಶಿ ಅಶೋಕ ಕುಸಬಿ, ಮೆಹಬೂಬ ಬಳ್ಳಾರಿ, ಇಬ್ರಾಹಿಮ ಮುಲ್ಲಾ, ಮಕ್ತುಮಸಾ ಮುಲ್ಲಾನವರ, ದುರ್ಗಪ್ಪ ಮಣ್ಣವಡ್ಡರ, ಮಲೇಶಪ್ಪ ಕಲಾಲ, ಖಾಜಾಸಾಬ ಇಸ್ಮಾಯಿಲನವರ, ಮೆಹರುನಿಸಾ ಡಂಬಳ ಹಾಗೂ ಮುಖಂಡರು ಉಪಸ್ಥಿತರಿದ್ದರು.

ಮಲ್ಲಸಮುದ್ರದ ಸರಕಾರಿ ಹಿರಿಯ ಕನ್ನಡ ಪ್ರಾಥಮಿಕ ಶಾಲೆಯಲ್ಲಿ 'ಚಿಣ್ಣರ ಬೇಸಿಗೆ ಶಿಬಿರ'

ಶಾಲೆಗಳು ಮಕ್ಕಳ ವಿಕಾಸಕ್ಕೆ ಪೂರಕವಾಗಬೇಕು

■ ವಿಜಯಸಾಕ್ಷಿ ಸುದ್ದಿ, ಗದಗ

ಗ್ರಾಮೀಣ ಭಾಗದ ಮಕ್ಕಳಿಗೆ ಈ ರೀತಿಯ ಹೊಸತನದ ಶಿಬಿರಗಳು, ಕಮ್ಮಟಗಳ ಅವಶ್ಯಕತೆಯಿದೆ. ಶಾಲೆ ಬರೀ ಅಂಕಗಳನ್ನು ಪಡೆದುಕೊಳ್ಳುವ ಕೇಂದ್ರಗಳಾಗದೇ ಮಕ್ಕಳ ಮನೋವಿಕಾಸ ಮತ್ತು ಪ್ರತಿಭೆಯನ್ನು ಪೋಷಿಸುವ ಕೇಂದ್ರಗಳಾಗಿ ಬದಲಾಗಬೇಕು. ಸಾಹಿತ್ಯ ಮತ್ತು ಕಲೆಗಳು ನಮ್ಮ ಸಂಸ್ಕೃತಿಯನ್ನು ಉಳಿಸಿಕೊಳ್ಳುವಲ್ಲಿ ಸಾಧನಗಳಾಗಬೇಕು. ಇಂದಿನ ಮಕ್ಕಳಿಗೆ ಕುಟುಂಬ ಮೌಲ್ಯಗಳನ್ನು, ವ್ಯಕ್ತಿತ್ವ ವಿಕಸನವನ್ನು ಅಳವಡಿಸಿಕೊಳ್ಳಲು ಈ ರೀತಿಯ ಚಟುವಟಿಕೆಗಳು ತುಂಬಾ ಸಹಾಯ ಮಾಡುತ್ತವೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ವಿ.ವಿ.ನಡುವಿನಮನಿ ಅಭಿಪ್ರಾಯಪಟ್ಟರು.

ಗದಗ ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಸರಕಾರಿ ಹಿರಿಯ ಕನ್ನಡ ಪ್ರಾಥಮಿಕ ಶಾಲೆ, ಮಲ್ಲಸಮುದ್ರ ಇವುಗಳ ಸಹಯೋಗದಲ್ಲಿ ಇತ್ತೀಚೆಗೆ ಮಲ್ಲಸಮುದ್ರದ ಸರಕಾರಿ ಹಿರಿಯ ಕನ್ನಡ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಂಡಿದ್ದ

ಎರಡು ದಿನಗಳ ಚಿಣ್ಣರ ಬೇಸಿಗೆ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಗದಗ ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ವಿ.ಎಮ್. ಹಿರೇಮಠ, ರಾಜ್ಯ ಸರಕಾರಿ ನೌಕರರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ.ಬಿ. ಕೊಣ್ಣೂರ, ಹರ್ತಿ ವಿಭಾಗದ ಸಿ.ಆರ್.ಪಿ ಆಯ್.ಎ. ಗಾಡಗೋಳಿ ಪಾಲ್ಗೊಂಡಿದ್ದರು.

ಪಾರ್ವತಿ ಬೇವಿನಮರದ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಪನ್ಮೂಲ ವ್ಯಕ್ತಿಗಳಾಗಿ ಶಾರದಾ ಕಾತರಕಿ, ಜಯಶ್ರೀ ಶ್ರೀಗಿರಿ, ವಿಜಯಲಕ್ಷ್ಮೀ ಬಿಂಕದಕಟ್ಟಿ, ಮಹೇಶ ಸಂದಿಗೋಡ, ಆಯ್.ಎ. ಗಾಡಗೋಳಿ, ವಿ.ಎಮ್. ಹಿರೇಮಠ ಪಾಲ್ಗೊಂಡಿದ್ದರು.

ಮುಕ್ತಾಯ ಸಮಾರಂಭದಲ್ಲಿ ಗದಗ ಜಿಲ್ಲಾ ಕಸಾಪ ಅಧ್ಯಕ್ಷ ವಿವೇಕಾನಂದಗೌಡ ಪಾಟೀಲ ಶಿಬಿರದ ಕೈಪಿಡಿ ಬಿಡುಗಡೆ ಮಾಡಿದರು. ಅತಿಥಿಗಳಾಗಿ ಡಿ.ಎಸ್.ತಳವಾರ ಪಾಲ್ಗೊಂಡಿದ್ದರು. ವೇದಿಕೆಯ ಮೇಲೆ ಜಿಲ್ಲಾ ಕಸಾಪ ಕೋಶಾಧ್ಯಕ್ಷ ಬಾಪುರೆಯವರು, ಗದಗ

> ಅಧ್ಯಕ್ಷತೆ ವಹಿಸಿದ್ದ ಗದಗ ತಾಲೂಕಾ ಕಸಾಪ ಅಧ್ಯಕ್ಷೆ ಡಾ. ರಶ್ಮಿ ಅಂಗಡಿ ಮಾತನಾಡಿ, ಗದಗ ತಾಲೂಕಾ ಕಸಾಪ ಘಟಕ ಗ್ರಾಮೀಣ ಭಾಗದಲ್ಲಿ ಹೆಚ್ಚು ಹೆಚ್ಚು ಕಾರ್ಯಗಳನ್ನು ಮಾಡುತ್ತಿದೆ. ಗ್ರಾಮೀಣರ ಬದುಕಿನಲ್ಲಿ ಕನ್ನಡ ಕುಸಿಯದಂತೆ ನೋಡಿಕೊಳ್ಳುವ ಹೊಣೆ ನಮ್ಮೆಲ್ಲರದ್ದಾಗಿದೆ. ಮಕ್ಕಳೊಂದಿಗೆ ಮಕ್ಕಳಾಗುವ ಸಮಯವನ್ನು ದೊಡ್ಡವರು ಅನುಭವಿಸಬೇಕು. ಅದು ಅವರ ಆರೋಗ್ಯಕ್ಕೂ ಮತ್ತು ಮಕ್ಕಳ ಮನೋವಿಕಾಸಕ್ಕೂ ಒಳ್ಳೆಯದು ಎಂದರು.

ತಾಲೂಕಾ ಪ್ರಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಎಸ್.ಆರ್. ಬಂಡಿ ಉಪಸ್ಥಿತರಿದ್ದರು. ಜಿ.ಬಿ. ಬಂಡಿಹಾಳ ಡಿ.ಎಸ್. ನಾಯಕ ಕಾರ್ಯಕ್ರಮ ನಿರೂಪಿಸಿದರು. ಎಫ್.ಎಮ್. ಇಟಗಿ, ಎಸ್.ಡಿ ಗುಂಜಾಳ, ಎಸ್.ಎಂ. ಅಂಗಡಿ, ವಿ.ಆರ್. ಬಾಣಾವತ್, ಕೆ.ಟಿ. ಪೂಜಾರ, ರೇಣುಕಾ ಬೆಂತೂರ ಸಹಕಾರವನ್ನು ನೀಡಿದರು.

ಪರಿಹಾರ ಹಣ ಜಮಾ ಆಗದಿರುವವರು ದಾಖಲೆಗಳನ್ನು ಮರುಪರಿಶೀಲಿಸಿ

■ ವಿಜಯಸಾಕ್ಷಿ ಸುದ್ದಿ, ಧಾರವಾಡ

ಬೆಳೆ ಹಾನಿ, ಬೆಳೆ ಪರಿಹಾರ ಜಮೆ ಅಗದೇ ಇರುವ ರೈತರು ತಾವು ಖಾತೆ ಹೊಂದಿರುವ ಬ್ಯಾಂಕ್‌ಗೆ ಭೇಟಿ ನೀಡಿ, ಖಾತೆ ಚಾಲ್ತಿ ಇರುವ ಬಗ್ಗೆ, ಕೆವೈಸಿ ಅಪ್‌ಡೇಟ್ ಆಗಿರುವ ಬಗ್ಗೆ ಮತ್ತು ಫ್ರೂಟ್ಸ್ ಸಂಖ್ಯೆ ಹೊಂದಿರುವ ಬಗ್ಗೆ ಪರಿಶೀಲಿಸಿ, ಖಾತರಿ ಮಾಡಿಕೊಳ್ಳಬೇಕೆಂದು ಜಿಲ್ಲಾಧಿಕಾರಿ ದಿವ್ಯ ಪ್ರಭು ತಿಳಿಸಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿರುವ ಅವರು, ಅಕೌಂಟ್ ಗಳನ್ನು ನಿರ್ಬಂ

ರಿಯಾಯಿತಿ ದರದ ಬೀಜ ವಿತರಣೆಗೆ ಕ್ರಮ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಶಿರಹಟ್ಟಿ ಮತಕ್ಷೇತ್ರದ ಲಕ್ಷ್ಮೇಶ್ವರ, ಶಿರಹಟ್ಟಿ, ಮುಂಡರಗಿ ತಾಲೂಕು ವ್ಯಾಪ್ತಿಯ ರೈತ ಸಂಪರ್ಕ ಕೇಂದ್ರಗಳಲ್ಲಿ ಪ್ರಸಕ್ತ ವರ್ಷದ ಮುಂಗಾರು ಹಂಗಾಮಿನ ರಿಯಾಯಿತಿ ದರದ ಬಿತ್ತನೆ ಬೀಜಗಳನ್ನು ಸೋಮವಾರದಿಂದ ವಿತರಿಸಲಾಗುವುದು. ರೈತರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಶಾಸಕ ಡಾ.ಚಂದ್ರು ಲಮಾಣಿ ತಿಳಿಸಿದ್ದಾರೆ.

ಈ ಬಗ್ಗೆ ಪತ್ರಿಕಾ ಹೇಳಿಕೆ ನೀಡಿರುವ ಅವರು, ವರ್ಷದ ಬರಗಾಲದಿಂದ ಆರ್ಥಿಕ ಸಂಕಷ್ಟದಲ್ಲಿರುವ ರೈತರಿಗೆ ಕೃಷಿ ಇಲಾಖೆಯಿಂದ ರಿಯಾಯಿತಿ ದರದ ಬಿತ್ತನೆ ಬೀಜಗಳು ಸಕಾಲದಲ್ಲಿ ವಿತರಣೆಯಾಗಬೇಕು. ಈಗಾಗಲೇ ಅನೇಕ ಕಡೆ ಕೃಷಿ ಚಟುವಟಿಕೆಗಳಿಗೆ ಪೂರಕವಾದ ಉತ್ತಮ ಮಳೆಯಾಗಿದೆ. ಸೋಮವಾರದೊಳಗೆ ರೈತ ಸಂಪರ್ಕ ಕೇಂದ್ರಗಳಲ್ಲಿ ಹೆಸರು, ಶೇಂಗಾ, ಜೋಳ, ತೆ-ಗರಿ, ಗೋವಿನಜೋಳ ಬಿತ್ತನೆ ಬೀಜಗಳು ಹಾಗೂ ಗೊಬ್ಬರದ ಕೊರತೆಯಾಗದಂತೆ ದಾಸ್ತಾನು ಮಾಡಿಕೊಳ್ಳಬೇಕು. ಅಗತ್ಯ ದಾಖಲೆಗಳ ಬಗ್ಗೆ ತಿಳಿಸಿ ಬೀಜ ಖರೀದಿಸಲು ಬಂದ ರೈತರೊಂದಿಗೆ ಸಹಕಾರ-ಸೌಜನ್ಯದಿಂದ ವರ್ತಿಸಬೇಕು ಎಂದು ಕೃಷಿ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಸರ್ಕಾರ ಕೃಷಿ ಇಲಾಖೆಯಿಂದ ವಿತರಿಸುವ ಪ್ರಮಾಣೀಕೃತ, ಮಾನ್ಯತೆ ಪಡೆದ ಉತ್ತಮ ಗುಣಮಟ್ಟದ ಬೀಜಗಳನ್ನು ಖರೀದಿಸಿ ಬಿತ್ತನೆ ಮಾಡಿದರೆ ಉತ್ತಮ ಇಳುವರಿ ಪಡೆಯಲು ಸಾಧ್ಯ. ಒಂದು ವೇಳೆ ರೈತರು ಕಂಪನಿ ಬೀಜ ಖರೀದಿಸಿದರೂ ಪ್ರಮಾಣೀಕೃತ, ಗುಣಮಟ್ಟದ ಬಿತ್ತನೆ ಬೀಜಗಳನ್ನು ಆಯ್ಕೆ ಮಾಡಿಕೊಳ್ಳಬೇಕು ಮತ್ತು ಅದಕ್ಕೆ ಅಧಿಕೃತ ರಶೀದಿ ಪಡೆದುಕೊಳ್ಳಬೇಕು ಎಂದು ತಿಳಿಸಿದ್ದಾರೆ.

ಚಿಕ್ಕಟ್ಟಿ ಶಾಲೆಯಲ್ಲಿ ಕೈಬರಹ ಸುಧಾರಣೆ ತರಬೇತಿ ಮುಕ್ತಾಯ

ಸುಂದರ ಬರಹ ವ್ಯಕ್ತಿತ್ವದ ಅಭಿವ್ಯಕ್ತಿ

■ ವಿಜಯಸಾಕ್ಷಿ ಸುದ್ದಿ, ಗದಗ

ಪರಿಶುದ್ಧ ಹಾಗೂ ಸುಂದರ ಬರಹವು ವ್ಯಕ್ತಿಯ ವ್ಯಕ್ತಿತ್ವವನ್ನು ಅಭಿವ್ಯಕ್ತಗೊಳಿಸುತ್ತದೆ. ವಿದ್ಯಾರ್ಥಿಗಳು ಪ್ರಾಥಮಿಕ, ಮಾಧ್ಯಮಿಕ ಹಂತದಲ್ಲೇ ಕೈಬರಹಗಳನ್ನು ಸುಧಾರಿಸಿಕೊಳ್ಳಬೇಕೆಂದು ಬನಶ್ರೀ ಎಕ್ಸಲಂಟ್ ಹ್ಯಾಂಡ್ ರೈಟಿಂಗ್ ಇನ್ಸ್‌ಟಿಟ್ಯೂಟ್‌ನ ಪ್ರಾಚಾರ್ಯ ಎಫ್. ಎಸ್. ಪಾಟೀಲ ಅಭಿಪ್ರಾಯಪಟ್ಟರು.

ಅವರು ಬುಧವಾರ ಗದುಗಿನ ಚಿಕ್ಕಟ್ಟಿ ಶಿಕ್ಷಣ ಸಮೂಹ ಸಂಸ್ಥೆಯಲ್ಲಿ ಚಿಕ್ಕಟ್ಟಿ ಸ್ಕೂಲ್‌ನ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ 4 ದಿನಗಳ ಕೈಬರಹ ಸುಧಾರಣೆ ತರಬೇತಿಯ ಮುಕ್ತಾಯ ಸಮಾರಂಭದಲ್ಲಿ ಮಾತನಾಡಿದರು.

ಮಕ್ಕಳ ಮನಸ್ಸು ಅತ್ಯಂತ ಸೂಕ್ಷ್ಮವಾಗಿರುತ್ತದೆ. ಶಿಕ್ಷಕರು ಮಕ್ಕಳ ಮನಸ್ಥಿತಿಯನ್ನರಿತು ಅವರ ತಿಳುವಳಿಕೆಯ ಆಳಕ್ಕಿಳಿದು ಬೋಧನೆ ಮಾಡಿದರೆ ಮಕ್ಕಳು ಬೇಗನೆ ಕಲಿಕೆಯತ್ತ ಆಕರ್ಷಿತರಾಗಿ, ಕಲಿಕೆಯ ಮೆಟ್ಟಿಲುಗಳನ್ನು ಹತ್ತುತ್ತಾ ಹೋಗುತ್ತಾರೆ ಎಂದರು.

ತರಬೇತಿ ಪಡೆದ ಮಕ್ಕಳಲ್ಲಿ ಬಹಳಷ್ಟು ತೀಕ್ಷ್ಣ ಮತ್ತು ಚುರುಕಾದ ಕಲಿಕಾ ಸಾಮರ್ಥ್ಯ ಇರುವುದರ ಪರಿಣಾಮವಾಗಿ, ಮಕ್ಕಳು ನಾಲ್ಕೇ ದಿನಗಳಲ್ಲಿ

ಕೈಬರಹದಲ್ಲಿ ಸಾಕಷ್ಟು ಗುಣಾತ್ಮಕ ಬದಲಾವಣೆ ತೋರಿಸಿದ್ದು ಅತೀವ ಸಂತೋಷ ಎನಿಸಿದೆ. ಬರಲಿರುವ ದಿನಗಳಲ್ಲಿ ಮಕ್ಕಳ ಭವಿಷ್ಯ ಸುಂದರವಾಗಿ ರೂಪುಗೊಳ್ಳಲೆಂದರು.

ಮುಖ್ಯ ಅತಿಥಿ, ಪತ್ರಕರ್ತ ಬಸವರಾಜ ದಂಡಿನ ಮಾತನಾಡಿ, ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾಗಿ ಮುಂಚೂಣಿಯಲ್ಲಿರುವ ಚಿಕ್ಕಟ್ಟಿ ಶಿಕ್ಷಣ ಸಮೂಹ ಸಂಸ್ಥೆ ಮಕ್ಕಳಿಗೆ ಗುಣಾತ್ಮಕ ಶಿಕ್ಷಣ, ಪಠ್ಯೇತರ ಚಟುವಟಿಕೆಗೆ, ಕ್ರೀಡೆ, ಸಾಂಸ್ಕೃತಿಕ ಕಾರ್ಯಚಟುವಟಿಕೆಗಳಲ್ಲದೆ ಇಂತಹ ವಿಶಿಷ್ಠ ತರಬೇತಿಯನ್ನು ಏರ್ಪಡಿಸುವ ಮೂಲಕ ಮಕ್ಕಳ ಕಲಿಕೆ ಮತ್ತು ಕೈಬರಹ ಸುಧಾರಣೆಗೆ ಕ್ರಮ ಜರುಗಿಸಿರುವದು ಮಕ್ಕಳ ಬಗೆಗಿನ ಕಾಳಜಿಯನ್ನು ಅಭಿವ್ಯಕ್ತಗೊಳಿಸುತ್ತದೆ ಎಂದರು.

ಸಂಸ್ಥೆಯ ಆಡಳಿತಾಧಿಕಾರಿ ಕಲಾವತಿ ಕೆಂಚರಾಹುತ್, ವಿನಯ ಚಿಕ್ಕಟ್ಟಿ ಐಸಿಎಸ್‌ಇ ಸ್ಕೂಲ್‌ನ ಉಪಪ್ರಾಚಾರ್ಯೆ ಶೋಭಾ ಸ್ಥಾವರಮಠ ಕೈಬರಹ ಸುಧಾರಣಾ ತರಬೇತಿಗೆ ಮೆಚ್ಚುಗೆ ವ್ಯಕ್ತಪಡಿಸಿದರು. ವೇದಿಕೆಯ ಮೇಲೆ

ಅಧ್ಯಕ್ಷತೆ ವಹಿಸಿ ಮಾತನಾಡಿದ ಚಿಕ್ಕಟ್ಟಿ ಶಿಕ್ಷಣ ಸಮೂಹ ಸಂಸ್ಥೆಯ ಸಂಸ್ಥಾಪಕ ಎಸ್. ವೈ. ಚಿಕ್ಕಟ್ಟಿ, ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಅವಶ್ಯಕ ಎಲ್ಲ ಕ್ರಮಗಳನ್ನು ಸಂಸ್ಥೆ ಕೈಗೊಳ್ಳುತ್ತಿದೆ. ಈ ಮಾಲಿಕೆಯಲ್ಲಿ ಕೈಬರಹ ಸುಧಾರಣೆ ತರಬೇತಿಗೆ ಉತ್ತಮ ಪ್ರತಿಕ್ರಿಯೆ ದೊರೆತಿದೆ. ನಾಲ್ಕೇ ದಿನಗಳಲ್ಲಿ ಮಕ್ಕಳು ಬರಹ ಶೈಲಿಯಲ್ಲಿ ಸಾಕಷ್ಟು ಗುಣಾತ್ಮಕತೆಯನ್ನು ಅಳವಡಿಸಿಕೊಳ್ಳಲು ಸ್ವಯಂ ಪ್ರೇರಣೆಯಿಂದ ಮತ್ತು ಉತ್ಸುಕತೆಯಿಂದ ಮುಂದಾಗಿರುವದು ಶ್ಲಾಘನೀಯ ಎಂದರು.

ಭಾರತೀಯ ಶಿಕ್ಷಣ ಸಂಸ್ಥೆಯ ಸದಸ್ಯ ರಾಜು ಅಡಕೆ, ಕೈಬರಹ ಸುಧಾರಣಾ ತರಬೇತುದಾರರಾದ ಲೀಲಾ ಪಾಟೀಲ, ಬಿಪಿನ್ ಚಿಕ್ಕಟ್ಟಿ ಇಂಗ್ಲೀಷ್ ಸ್ಕೂಲ್‌ನ ಉಪಪ್ರಾಚಾರ್ಯರಾದ ರಿಯಾನ್ ಮುಲ್ಲಾ ಉಪಸ್ಥಿತರಿದ್ದರು.

ಪ್ರಾರಂಭದಲ್ಲಿ ಶಿಕ್ಷಕಿ ಅಲ್ಕೋಡ ಪ್ರಾರ್ಥಿಸಿದರು, ವೆಂಕಟೇಶ ರಾವ್ ಸ್ವಾಗತಿಸಿದರು, ಕೀರ್ತಿ ಹಾಗೂ ನಿಕಿತಾ ನಿರೂಪಿಸಿದರು. ಆಶಾಭೀ ವಂದಿಸಿದರು. ಕಾರ್ಯಕ್ರಮದಲ್ಲಿ ಶಾಲೆಯ ಶಿಕ್ಷಕ ವೃಂದ, ವಿದ್ಯಾರ್ಥಿಗಳು ಹಾಗೂ ಪಾಲಕರು ಪಾಲ್ಗೊಂಡಿದ್ದರು.

ನದಾಫ್ ಪಿಂಜಾರ ಸಂಘದ ಜಿಲ್ಲಾ ಘಟಕದ ಪದಾಧಿಕಾರಿಗಳ ಸಮಾಲೋಚನಾ ಸಭೆ

ಸಾಮೂಹಿಕ ಹೋರಾಟದಿಂದ ನಿಗಮ ಸ್ಥಾಪನೆ

■ ವಿಜಯಸಾಕ್ಷಿ ಸುದ್ದಿ, ಗದಗ

ನದಾಫ್ ಪಿಂಜಾರ ಸಮುದಾಯ ಶೈಕ್ಷಣಿಕ, ಆರ್ಥಿಕವಾಗಿ, ರಾಜಕೀಯ ವಾಗಿ ಅಭಿವೃದ್ಧಿ ಹೊಂದಲು ಸರಕಾರದಿಂದ ಮೀಸಲಾತಿ ಮತ್ತು ಗುರುತಿಸುವಿಕೆ ಬಹಳ ಮುಖ್ಯವಾಗಿದೆ. ಕಳೆದ ಐದು ವರುಷಗಳ ಅವಧಿಯಲ್ಲಿ ಸರಕಾರದೊಂದಿಗೆ ನಿರಂತರ ನಿವೇದನೆ ಮತ್ತು ಸಂಘದ ಸಾಮೂಹಿಕ ಹೋರಾಟದ ಫಲದಿಂದ ಕರ್ನಾಟಕ ನದಾಫ್ ಪಿಂಜಾರ ನಿಗಮ ಸ್ಥಾಪನೆ ಮತ್ತು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ನದಾಫ್ ಪಿಂಜಾರ ಅಧ್ಯಯನ ಪೀಠವಾಗಲು ಸಾಧ್ಯವಾಯಿತು ಎಂದು ಕರ್ನಾಟಕ ರಾಜ್ಯ ನದಾಫ್ ಪಿಂಜಾರ ಸಂಘದ ರಾಜ್ಯಧ್ಯಕ್ಷ ಹೆಚ್ ಜಲೀಲಸಾಬ ಮಾಹಿತಿ ನೀಡಿದರು.

ಅವರು ಗದಗ ನಗರದಲ್ಲಿ ಕರ್ನಾಟಕ ರಾಜ್ಯ ಸರಕಾರಿ ನೌಕರರ ಭವನದಲ್ಲಿ ನಡೆದ ಗದಗ ಜಿಲ್ಲಾ ಘಟಕದ ಪದಾಧಿಕಾರಿಗಳ ಸಮಾಲೋಚನಾ ಸಭೆಯಲ್ಲಿ ಮಾತನಾಡಿದರು.

ರಾಜ್ಯ ಉಪಾಧ್ಯಕ್ಷ ಜಿ.ಡಿ. ನದಾಫ್ ಅವರು 2019-2024ರ ಅವಧಿಯಲ್ಲಿ ಸಂಘದ ರಾಜ್ಯ ಘಟಕದಿಂದ ವಿದ್ಯಾರ್ಥಿಗಳಿಗೆ ಮಾಡಿದ ಶೈಕ್ಷಣಿಕ ಸಹಾಯ, ಕಟ್ಟಡ ಅಭಿವೃದ್ಧಿ, ಸರಕಾರದಿಂದ ಪಡೆದ ಅನುದಾನ, ಹೆಚ್. ಇಬ್ರಾಹಿಂ ಸಾಹೇಬರವರ ಹೆಸರಲ್ಲಿ ನೀಡಿದ ಪ್ರಶಸ್ತಿ, ಸಮಾಜದ ಸಂಘಟನೆಗಾಗಿ ಮಾಡಿದ ಬೈಲಾ ತಿದ್ದುಪಡಿ ಕಾರ್ಯಗಳು ಮತ್ತು ಸಾಧನೆಗಳ ಬಗ್ಗೆ ಸವಿಸ್ತಾರವಾಗಿ ತಿಳಿಸಿದರು.

ರಾಜ್ಯ ಸಲಹಾ ಸಮಿತಿ ಅಧ್ಯಕ್ಷ ಜ.ದಾದಾ ಖಲಂದರ ಸಾಹೇಬ, ಗದಗ ಜಿಲ್ಲಾ ಅಧ್ಯಕ್ಷ ಕೆ.ಎಫ್. ಹಳ್ಯಾಳ, ರಾಜ್ಯ ಸಂಘಟನಾ ಕಾರ್ಯದರ್ಶಿ ಚಮನ್ ಫರ್ಜಾನಾ ಮತ್ತು ಶಹಾಬುದ್ದಿನ್ ಟೋಪಿವಾಲೆ, ಗದಗ ಜಿಲ್ಲಾ ಉಪಾಧ್ಯಕ್ಷ ಬಿ.ಪಿ. ಅತ್ತಿಗೇರಿ, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಇಮಾಮಸಾಬ ಹುಬ್ಬಳ್ಳಿ, ಗದಗ-ಬೆಟಗೇರಿ ಶಹರ ಅಧ್ಯಕ್ಷ ಮೈನುದ್ದಿನ್ ಬಿಜಾಪೂರ, ತಾಲೂಕಾ ಘಟಕಗಳ ಅಪ್ಪಸಾಬ, ಬಾಬಾಜಾನ್, ಮೌಲಾಸಾಬ ನದಾಫ್, ದಾವಲಸಾಬ, ರಾಜೇಸಾಬ ನರಗುಂದ, ರಮಜಾನಸಾಬ ನದಾಫ್ ತಮ್ಮ ಅಭಿಪ್ರಾಯ ಮತ್ತು ಕಾರ್ಯಗಳ ಬಗ್ಗೆ ಮಾತನಾಡಿದರು.

ಈ ಸಂದರ್ಭದಲ್ಲಿ ಸಂಘದ ಪದಾಧಿಕಾರಿಗಳಾದ ಸಲೀಮ್ ನಾಗ್ತೇ, ಶಹಾಬುದ್ದಿನ್ ನೂರಾಬಾಷ, ಇಮಾಮಸಾಬ ಸೂಡಿ, ಹೆಚ್.ಆರ್. ನದಾಫ್, ಶರೀಫಸಾಬ ಮಾಸ್ಟರ್, ಯಮನೂರಸಾಬ ನದಾಫ್, ತಾಜಬಿ ಬಿ ನದಾಫ್, ರಾಜಭಕ್ಷಿ ಹರ್ಲಾಪೂರ, ಶೌಕತಅಲಿ ಎಂ.ಅಣ್ಣಿಗೇರಿ, ಹುಸೇನಸಾಬ ನದಾಫ್, ಕೆ.ಎಫ್ (ರಬ್ಬಾನಿ) ಹುಲಕೋಟಿ, ರಾಜೇಸಾಬ ಅಣ್ಣಿಗೇರಿ, ಶಾಬುದ್ದಿನ್ ಟೋಪಿವಾಲೆ, ದಾವಲ ಚಿಂಚಲಿ, ಟೀಪುಸಾಬ ನದಾಫ್, ಆಯ್.ಎಮ್. ನದಾಫ್, ಚಂದ್ರಶೇಖರ, ಮುದ್ದಾಬಳ್ಳಿ, ಸಲಮಾ, ಫರಿದಾಬೇಗಂ ಎಂ.ನದಾಫ್, ಹಸೇನಾ ಬೇಗಂ ಸಿದ್ದಾಪೂರ, ತಾಲೂಕು ಘಟಕಗಳ ಅಧ್ಯಕ್ಷರು, ಪದಾಧಿಕಾರಿಗಳು ಭಾಗವಹಿಸಿದ್ದರು. ಬಾಬಾಜಾನವರು ಕುರಾನ್ ಪಠಣ ಮಾಡಿದರು. ಗದಗ ಜಿಲ್ಲಾ ಕಾರ್ಯದರ್ಶಿ ಎಂ.ಬಿ. ನದಾಫ್ ಸ್ವಾಗತಿಸಿ ವಂದಿಸಿದರು.

ಆನ್‌ಲೈನ್ ಮೂಲಕ ಅರ್ಜಿ ಆಹ್ವಾನ

■ ವಿಜಯಸಾಕ್ಷಿ ಸುದ್ದಿ, ಗದಗ

ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯ ಮುಂಡರಗಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗೆ 2024-25ನೇ ಶೈಕ್ಷಣಿಕ ಸಾಲಿನ ಐಟಿಐ ಪ್ರವೇಶಕ್ಕಾಗಿ ಸಿಟಿಎಸ್ ಹಾಗೂ ಉದ್ಯೋಗ ಯೋಜನೆಯಡಿ ಎಲೆಕ್ಟ್ರಿಷಿಯನ್, ಫಿಟ್ಟರ್ , ಇಂಡಸ್ಟ್ರಿಯಲ್ ರೋಬೋಟೆಕ್ ಮತ್ತು ಡಿಜಿಟಲ್ ಮ್ಯಾನ್ಯುಫ್ಯಾಕ್ಚರಿಂಗ್ ಟೆಕ್ನಿಷಿಯನ್, ಮ್ಯಾನ್ಯುಫ್ಯಾಕ್ಚರಿಂಗ್ ಪ್ರೊಸೆಸ್ ಕಂಟ್ರೋಲ್ ಮತ್ತು ಅಟೋಮೇಷನ್, ಮೆಕ್ಯಾನಿಕ್ ಎಲೆಕ್ಟ್ರಿಕ್ ವೆಹಿಕಲ್ ಈ ವೃತ್ತಿಗಳಿಗೆ ಆನ್‌ಲೈನ್ ಮುಖಾಂತರ ಇಲಾಖಾ ವೆಬ್‌ಸೈಟ್: www.cite.karnataka.gov.in ರಲ್ಲಿ ಮೇ 20ರಿಂದ ಜೂನ್ 4ರವರೆಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಯನ್ನು ಕಚೇರಿಯ ಕೆಲಸದ ಸಮಯದಲ್ಲಿ ಭೇಟಿ ಮಾಡಿ ಅಥವಾ ದೂರವಾಣಿ ಸಂಖ್ಯೆ: 8951570462, 9448022727, 9620842796 ಗಳಿಗೆ ಕರೆ ಮಾಡಿ ಪಡೆಯಬಹುದಾಗಿದೆ ಎಂದು ಪ್ರಾಚಾರ್ಯ ಸಿದ್ಧಪ್ಪ ಚಂಗಳಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಛಾಯಾಗ್ರಾಹಕರ ಮೇಲಿನ ಹಲ್ಲೆಗೆ ಖಂಡನೆ

■ ವಿಜಯಸಾಕ್ಷಿ ಸುದ್ದಿ, ರೋಣ

ಇಲ್ಲಿನ ಶಿವಾಜಿ ನಗರದಲ್ಲಿ ವೃತ್ತಿಪರ ಛಾಯಾಗ್ರಾಹಕರ ಮೇಲೆ ಹಲ್ಲೆ ನಡೆದಿರುವುದು ಖಂಡನೀಯ ವಾಗಿದ್ದು, ಹಲ್ಲೆಗೊಳಗಾದ ಛಾಯಾಗ್ರಾಹಕರಿಗೆ ನ್ಯಾಯ ಒದಗಿಸಬೇಕು ಎಂದು ತಾಲೂಕಾ ಛಾಯಾಗ್ರಾಹಕರ ಸಂಘಟನೆಯ ಪದಾಧಿಕಾರಿಗಳು ಉಪತಹಸೀಲ್ದಾರ ಮೀನಾ ರತ್ನಾಕರ್‌ರವರಿಗೆ ಮನವಿ ಸಲ್ಲಿಸಿದರು.

ಎಂ.ಜಿ. ಮಂಗಳೂರ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಛಾಯಾಗ್ರಾಹಕರು ಭಯದಲ್ಲಿ ಓಡಾಡುವ ಸ್ಥಿತಿ ನಿರ್ಮಾಣವಾಗಿದ್ದು, ಛಾಯಾಗ್ರಾಹಕರನ್ನು ರಸ್ತೆಗಳಲ್ಲಿ ತಡೆದು ಪರಿಕರಗಳನ್ನು ಕಿತ್ತುಕೊಳ್ಳುವ ಘಟನೆಗಳೂ ನಡೆದಿವೆ. ಹೀಗಾಗಿ, ವೃತ್ತಿಪರ ಛಾಯಾಗ್ರಾಹಕರಿಗೆ ಸೂಕ್ತ ರಕ್ಷಣೆ ಒದಗಿಸಬೇಕು ಹಾಗೂ ಹಲ್ಲೆಗೊಳಗಾದ ಛಯಾಗ್ರಾಹಕರಿಗೆ ಈ ಕೂಡಲೇ ನ್ಯಾಯ ಒದಗಿಸಬೇಕು ಎಂದು ಒತ್ತಾಯಿಸಿದರು.

ಬಸವರಾಜ ಪಲ್ಲೇದ, ಪ್ರಭುಗೌಡ ಪಾಟೀಲ, ಎನ್. ಎಸ್. ಕಾಶಪ್ಪನವರ, ಎಸ್.ಸಿ. ರೆಡ್ಡೆರ, ಕಿರಣ ಮಿಸ್ಕೀನ್, ಪಿ.ಎಸ್. ಪಾಟೀಲ, ಎಂ.ಸಿ. ಕುಲಕರ್ಣಿ, ಶಿವಕುಮಾರ ತಿಪಶೆಟ್ರ, ಶರಣಪ್ಪ ಮಡಿವಾಳರ, ವಿರೇಶ ವಡ್ಡಿನ, ಶ್ರೀಶೈಲ ಚೆನ್ನಪ್ಪಗೌಡ್ರ, ಎಸ್.ಹಿರೇಮಠ ಸೇರಿದಂತೆ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಅರೆ ಪ್ರಜ್ಞಾವಸ್ಥೆಯಲ್ಲಿ ರೈತ ಸಂಪರ್ಕ ಕೇಂದ್ರ

■ ವಿಜಯಸಾಕ್ಷಿ ಸುದ್ದಿ, ನರಗುಂದ

ರೈತರಿಗೆ ಅಗತ್ಯ ಬೀಜ, ಗೊಬ್ಬರ ಇನ್ನಿತರ ಸವಲತ್ತುಗಳನ್ನು ಒದಗಿಸಬೇಕಾದ ರೈತ ಸಂಪರ್ಕ ಕೇಂದ್ರ ಮುಂಜಾನೆ 10.30, 11 ಗಂಟೆಯಾದರೂ ಬೀಗ ತೆಗೆಯದೇ ಇರುವುದಕ್ಕೆ ಗ್ರಾಮದ ರೈತರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ನರಗುಂದ ತಾಲೂಕಿನ ಕೊಣ್ಣೂರ ಹೊಬಳಿಯಲ್ಲಿರುವ ರೈತ ಸಂಪರ್ಕ ಕೇಂದ್ರ ಸುತ್ತಮುತ್ತಲಿನ ಹತ್ತು ಹಳ್ಳಿಗಳ ರೈತರಿಗೆ ಕೃಷಿ ಸಂಬಂಧಿತ ಮಾಹಿತಿ ಹಾಗೂ ಬೀಜ, ಗೊಬ್ಬರ ಇತ್ಯಾದಿ ಪರಿಕರಗಳನ್ನು ವಿತರಣೆಗೆ ಅನೂಕುಲವಾಗಲೆಂದೇ ಸ್ಥಾಪಿಸಲಾಗಿದ್ದು, ಸಂಬಂಧಪಟ್ಟ ಅಧಿಕಾರಿಗಳು ಕಚೇರಿಯ ಸಮಯಕ್ಕೆ ಸರಿಯಾಗಿ ಬರುತ್ತಿಲ್ಲ ಎಂದು ರೈತರು ಆರೋಪಿಸಿದ್ದಾರೆ.

ಯಾವುದೋ ಸಭೆಯಿದೆ, ಕಚೇರಿ ಕೆಲಸವಿದೆ ಎಂದು ಕುಂಟು ನೆಪ ಹೇಳಿ ಮಧ್ಯಾಹ್ನ 2 ಅಥವಾ 3 ಗಂಟೆಗೆ ಬೀಗ ಹಾಕುತ್ತಾರೆ. ಹೀಗಾದರೆ, ರೈತರಿಗೆ ಅನುಕೂಲಗಳನ್ನು ಕಲ್ಪಿಸುವುದು ಯಾವಾಗ ಎಂಬುದು ರೈತರ ಪ್ರಶ್ನೆ.

ಶಿಕ್ಷಕನಿಗೆ ಪರ್ಯಾಯ ಯಾವುದೂ ಇಲ್ಲ

■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಮಕ್ಕಳಿಗೆ ಕಲಿಸುವುದು ನಿಜವಾದ ಶಿಕ್ಷಣವಲ್ಲ. ಸ್ವಪ್ರೇರಣೆಯಿಂದ ಮಕ್ಕಳೇ ಕಲಿಯುವಂತೆ ಮಾಡುವುದು ನಿಜವಾದ ಶಿಕ್ಷಣ. ಈಗ ಹೊಸದಾಗಿ ಜಾರಿಗೆ ಬಂದಿರುವ ಶಿಕ್ಷಣ ನೀತಿಯು ಇದೇ ಮಾತನ್ನು ಪುರಸ್ಕರಿಸುತ್ತಿದ್ದು, ಶಿಕ್ಷಕರು ಮಕ್ಕಳಿಗೆ ಕಲಿಸಲು ಮುಂದಾಗದೆ ಕಲಿಯುವಂತೆ ಪ್ರೇರಣೆ ನೀಡಬೇಕಾದುದು ಅವಶ್ಯಕ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕ ಸಿದ್ದರಾಮ ಮನಹಳ್ಳಿ ಹೇಳಿದರು.

ಇಲ್ಲಿನ ಶ್ರೀ ಅನ್ನದಾನೇಶ್ವರ ಸಭಾಂಗಣದಲ್ಲಿ ಅಕ್ಷರ ಭಾರತ ಪ್ರತಿಷ್ಠಾನ ಗದಗ ಹಾಗೂ ಶ್ರೀ ಅನ್ನದಾನ ವಿಜಯ ವಿದ್ಯಾ ಪ್ರಸಾರಕ ಸಮಿತಿಯ ಸಹಯೋಗದಲ್ಲಿ ನಡೆದಿರುವ ಶೈಕ್ಷಣಿಕ ಪುನಶ್ಚೇತನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಶಿಕ್ಷಣದಲ್ಲಿ ಶಿಕ್ಷಕನಿಗೆ ಪರ್ಯಾಯ ಎಂಬುದು ಯಾವುದೂ ಇಲ್ಲ. ಶಿಕ್ಷಕನೇ ಒಂದು ಬಲಿಷ್ಠವಾದ ಕಲಿಕೋಪಕರಣ. ಇತರೆ ಎಲ್ಲ ಕಲಿಕೋಪಕರಣಗಳು ಅವನಿಗೆ ಕಲಿಸಲು ಸಹಾಯಕವಷ್ಟೆ. ಬೋಧನೆ ಎಂಬುದು ಮನೋ ವ್ಯಾಪಾರವಾಗಿದ್ದು, ಶಿಕ್ಷಕರು ಈ ವ್ಯಾಪಾರವನ್ನು ವರ್ಗ ಕೋಣೆಗಳಲ್ಲಿ ಅತ್ಯಂತ ಸಮರ್ಪಕವಾಗಿ ಮಾಡಬೇಕಿದೆ. ಜಗತ್ತನ್ನು ಬದಲಿಸುವ ಶಕ್ತಿ ಶಿಕ್ಷಣಕ್ಕಿದೆ. ಈ ಹಿಂದಿನ ದಿನಗಳಿಗಿಂತಲೂ ಇಂದಿನ ದಿನಗಳಲ್ಲಿ ಶಿಕ್ಷಣಕ್ಕೆ ಇನ್ನಿಲ್ಲದ ಮಹತ್ವ ಸಿಗುತ್ತಿದೆ. ಆದ್ದರಿಂದ ಶಿಕ್ಷಕರು ತಮ್ಮ ವಿದ್ಯಾರ್ಥಿಗಳನ್ನು ಸಮರ್ಪಕವಾಗಿ ಸಿದ್ಧ ಮಾಡುವತ್ತ ಗಮನ ಹರಿಸಬೇಕೆಂದು ಹೇಳಿದರು.

ಕಾಲೇಜು ಆಡಳಿತ ಮಂಡಳಿ ಅಧ್ಯಕ್ಷ ಬಸವರಾಜ ವೀರಾಪೂರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ತೋಟಗಾರಿಕೆ ತರಬೇತಿ ಕೇಂದ್ರದಲ್ಲಿ ತರಬೇತಿಗಾಗಿ ಅರ್ಜಿ ಅಹ್ವಾನ

■ ವಿಜಯಸಾಕ್ಷಿ ಸುದ್ದಿ, ಗದಗ

2024-25ನೇ ಸಾಲಿನ ಗದಗ ತೋಟಗಾರಿಕೆ ತರಬೇತಿ ಕೇಂದ್ರದಲ್ಲಿ ದಿ. 15-06-2024 ರಿಂದ 31-03-2025 ರವರೆಗೆ ರೈತರ ಮಕ್ಕಳಿಗೆ 10 ತಿಂಗಳ ತೋಟಗಾರಿಕೆ ತರಬೇತಿಯನ್ನು ಹಮ್ಮಿಕೊಳ್ಳಲಾಗುವುದು.

ಈ ಸಂಬಂಧ ಅಭ್ಯರ್ಥಿಗಳನ್ನು ಪ್ರವೇಶ ಪತ್ರಗಳ